## ಸಾಹಿತ್ಯ ಸಿಂಚನ

### ಬೆಳಕಾಗುವ ಕತ್ತಲೆ

ಕತ್ತಲೆಯ ಹಾದಿಯಲ್ಲೂ ಭರವಸೆಯ ದೀಪ
ಹೊತ್ತಿರಲಿ,
ನೊಂದ ಮನದೊಳಗೆ ಹೊಸ ಕನಸೊಂದು
ಮೂಡಿರಲಿ.
ನಿನ್ನೆಗಿನ ನೋವು ಇಂದು ಪಾಠವಾಗಿ ಉಳಿಯಲಿ,
ನಾಳೆಯ ಬೆಳಕು ನಿನ್ನ ಹೆಜ್ಜೆಗಳಿಗೆ ದಾರಿಯಾಗಲಿ.

ಮೋಡ ಮುಚ್ಚಿದರೂ ಸೂರ್ಯನು
ಮರೆಯಾಗುವುದಿಲ್ಲ,
ರಾತ್ರಿ ಎಷ್ಟೇ ಗಾಢವಾದರೂ ಬೆಳಗ್ಗೆ ನಿಲ್ಲುವುದಿಲ್ಲ.
ಮೌನದೊಳಗೊಂದು ಹೊಸ ಸಂಗೀತ ಹುಟ್ಟುತ್ತದೆ,
ಕಾಯುವ ಹೃದಯದಲ್ಲಿ ಆಶೆಯ ಹೂ ಅರಳುತ್ತದೆ.

ಬಿದ್ದ ಹೆಜ್ಜೆಗಳು ಗೆಲುವಿನ ಪಾಠವಾಗಲಿ,
ಕಣ್ಣೀರ ಹನಿಗಳು ನಗುವಿನ ಮುತ್ತಾಗಲಿ.
ಕಷ್ಟದ ದಾರಿಯಲ್ಲೂ ಧೈರ್ಯ ನಿನ್ನ ಜೊತೆ ಇರಲಿ,
ಕನಸುಗಳ ಹಾದಿಯಲ್ಲಿ ನಂಬಿಕೆ ನಿನ್ನ ಕೈ ಹಿಡಿಯಲಿ.


ಕತ್ತಲೆ ಎಷ್ಟೇ ದೀರ್ಘವಾದರೂ ಹೆದರಬೇಡ,
ಬೆಳಕಿನ ಕ್ಷಣ ದೂರವೆಂದು ಕುಗ್ಗಬೇಡ.
ಪ್ರತಿ ನೋವಿನ ಹಿಂದೆ ಹೊಸ ಸಂತೋಷವಿದೆ,
ಪ್ರತಿ ಸೋಲಿನ ಹಿಂದೆ ಗೆಲುವಿನ ಬೀಜವಿದೆ.

ನಿನ್ನೊಳಗಿನ ನಂಬಿಕೆಯೇ ನಿನ್ನ ಶಕ್ತಿಯಾಗಲಿ,
ನಿನ್ನ ಕನಸುಗಳೇ ನಿನ್ನ ಬದುಕಿನ ದಾರಿಯಾಗಲಿ.
ಕತ್ತಲೆಯ ಕೊನೆಯಲ್ಲಿ ಬೆಳಕು ಖಂಡಿತ ಮೂಡುತ್ತದೆ,
ಭರವಸೆಯ ಹೃದಯದಲ್ಲಿ ಹೊಸ ಬೆಳಗು ಹುಟ್ಟುತ್ತದೆ.

## ಎಸ್‌ಐಆರ್: ಶೇ.83ರಷ್ಟು ಮತದಾರರಿಗೆ ನೋಟಿಸ್ ತಲುಪಿಲ್ಲ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮತದಾರರಲ್ಲಿ ಗೊಂದಲ ಹಾಗೂ ಆತಂಕಕ್ಕೆ ಕಾರಣವಾಗಿದ್ದು, ನೋಟಿಸ್ ವಿತರಣೆ ಪ್ರಕ್ರಿಯೆಯೇ ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಿದೆ. ನಿಗದಿತ ವೇಳಾಪಟ್ಟಿಯಂತೆ ನೋಟಿಸ್‌ಗಳನ್ನು ವಿತರಿಸಲಾಗುತ್ತಿದೆ**



**ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿ ಸ್ಪಷ್ಟಪಡಿಸಿದ್ದರೂ, ಸಿದ್ಧಪಡಿಸಿರುವ ನೋಟಿಸ್‌ಗಳ ಪೈಕಿ ಶೇ.83ರಷ್ಟು ಇನ್ನೂ ಮತದಾರರನ್ನು ತಲುಪಿಲ್ಲ.**

ರಾಜ್ಯದಲ್ಲಿ ಇದುವರೆಗೆ 43.8 ಲಕ್ಷ ನೋಟಿಸ್‌ಗಳನ್ನು ಸಿದ್ಧಪಡಿಸಲಾಗಿದ್ದು, ಈ ಪೈಕಿ ಕೇವಲ 7.3 ಲಕ್ಷ ನೋಟಿಸ್‌ಗಳು ಮಾತ್ರ ಸಂಬಂಧಪಟ್ಟ ಮತದಾರರಿಗೆ ತಲುಪಿವೆ. ಸುಮಾರು 36.4 ಲಕ್ಷ ನೋಟಿಸ್‌ಗಳು ಇನ್ನೂ ವಿತರಣೆ ಬಾಕಿಯಿದ್ದು, ಇದು ಒಟ್ಟು ನೋಟಿಸ್‌ಗಳ ಶೇ.83ರಷ್ಟಾಗಿದೆ. ಚುನಾವಣಾ ಕಚೇರಿ ಪ್ರಕಟಿಸಿರುವ ಪಟ್ಟಿಗಳಲ್ಲೂ ಕೆಲವೆಡೆ ನಿಖರವಾದ ವಿಚಾರಣೆಯ ದಿನಾಂಕವನ್ನು ನಮೂದಿಸದಿರುವುದು ಸಮಸ್ಯೆಗೆ ಕಾರಣವಾಗಿದೆ. ಬಿಎಲ್‌ಒ ಭೇಟಿ ಯಾವಾಗ ನಡೆಯಲಿದೆ ಹಾಗೂ ವಿಚಾರಣೆಗೆ ಯಾವ ದಿನ ಹಾಜರಾಗಬೇಕು ಎಂಬ ಬಗ್ಗೆ ಮತದಾರರಲ್ಲಿ ಅನಿಶ್ಚಿತತೆ ಮುಂದುವರಿದಿದೆ.

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಸೇರಿದಂತೆ ವಿವಿಧ ನಾಗರಿಕ ವೇದಿಕೆಗಳು ಕೂಡ ನೋಟಿಸ್‌ಗಳು ವಿಚಾರಣೆಗೆ ಕೇವಲ ಒಂದು ದಿನ ಮುನ್ನ ತಲುಪುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿವೆ. ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ವಿಚಾರಣೆಗೆ ಸಿದ್ಧರಾಗಲು ಇದ-ರಿಂದ ಸಾಕಷ್ಟು ಸಮಯ ಸಿಗುತ್ತಿಲ್ಲ ಎಂಬುದು ಅವರ ಅಳಲು. ದಾಖಲೆಗಳ ಪರಿಶೀಲನೆಯಲ್ಲಿ ಗೊಂದಲ ಮತದಾರರ ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ನಡುವೆ ಏಕರೂಪತೆಯಿಲ್ಲದಿರುವುದು ಮತ್ತಷ್ಟು ಗೊಂದಲಕ್ಕೆ ಕಾರಣವಾಗಿದೆ. ಆಧಾರ್ ಕಾರ್ಡ್ ಸೇರಿದಂತೆ ದಾಖಲೆಗಳ ಸ್ವೀಕಾರದ ವಿಚಾರದಲ್ಲಿ ಕೆಲವೆಡೆ ವಿಭಿನ್ನ ರೀತಿಯಲ್ಲಿ ಸೂಚನೆ ನೀಡಲಾಗುತ್ತಿದೆ ಎಂಬ ದೂರುಗಳು ಕೇಳಿಬಂದಿವೆ. ಕೆಲವು ಕಡೆ ಆಧಾರ್ ಕಾರ್ಡ್ ಅನ್ನು ಸ್ವೀಕರಿಸದೆ, ಎಲ್‌ಐಸಿ ಬಾಂಡ್, ಬ್ಯಾಂಕ್ ಪಾಸ್‌ಬುಕ್ ಸೇರಿದಂತೆ ಇತರ ದಾಖಲೆಗಳನ್ನು ಸಲ್ಲಿಸುವಂತೆ ಒತ್ತಾಯಿಸಲಾಗುತ್ತಿದೆ ಎನ್ನಲಾಗಿದೆ.

ಇದರ ಜತೆಗೆ ವಾರದ ಕೆಲಸದ ದಿನಗಳಲ್ಲೇ ವಿಚಾರಣೆಗಳನ್ನು ನಿಗದಿಪಡಿಸಿರುವುದರಿಂದ ಸರ್ಕಾರಿ ಹಾಗೂ ಖಾಸಗಿ ವಲಯದ ನೌಕರರು, ಸಾಫ್ಟ್‌ವೇರ್ ವೃತ್ತಿಪರರು ತೊಂದರೆ ಅನುಭವಿಸುವಂತಾಗಿದೆ. ವಿಚಾರಣೆಗೆ ಹಾಜರಾಗಲು ರಜೆ ಪಡೆಯಬೇಕಾದ ಅನಿವಾರ್ಯತೆ ಎದುರಾಗಿದೆ.

# ಜಾಲಹಳ್ಳಿ ಉರ್ದು ಶಾಲೆ ಹಾಗೂ ಜಾಮಿಯಾ ಮಸೀದಿ ನೂತನ ಕಟ್ಟಡಕ್ಕೆ ಅನುದಾನಕ್ಕೆ ಮನವಿ

## ಶಾಸಕಿ ಕರಿಯಮ್ಮ ಜಿ. ನಾಯಕ್ ಅವರಿಗೆ ಮುಸ್ಲಿಂ ಸಮುದಾಯದ ಮುಖಂಡರಿಂದ ಮನವಿ; ಶೀಘ್ರ ಅನುದಾನಕ್ಕೆ ಶಿಫಾರಸು ಮಾಡುವ ಭರವಸೆ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ ಮುಸ್ಲಿಂ ಸಮುದಾಯದ ಮುಖಂಡರು ದೇವದುರ್ಗ ವಿಧಾನಸಭಾ ಕ್ಷೇತ್ರದ ಶಾಸಕಿ ಕರಿಯಮ್ಮ ಜಿ. ನಾಯಕ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ, ಜಾಲಹಳ್ಳಿ ಪಟ್ಟಣದ ವಿವಿಧ ಬೇಡಿಕೆಗಳ ಕುರಿತು ಮನವಿ ಸಲ್ಲಿಸಿದರು.**

ಜಾಲಹಳ್ಳಿ ಜಾಮಿಯಾ ಮಸೀದಿ ಆವರಣದಲ್ಲಿ ಪ್ರಸ್ತುತ ನಡೆಯುತ್ತಿರುವ ಸರ್ಕಾರಿ ಉರ್ದು ಶಾಲೆಗೆ ಸ್ವಂತ ಹಾಗೂ ಸುಸಜ್ಜಿತ ಕಟ್ಟಡದ ಅಗತ್ಯವಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೂತನ ಹೈಟೆಕ್ ಉರ್ದು ಶಾಲಾ ಕಟ್ಟಡವನ್ನು ಬೇರೆ ಸೂಕ್ತ ಜಾಗದಲ್ಲಿ ಶೀಘ್ರ ಮಂಜೂರು ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು. ಅದೇ ರೀತಿ, ಜಾಲಹಳ್ಳಿ ಜಾಮಿಯಾ ಮಸೀದಿ ಕಟ್ಟಡವು ಬಹಳ ಹಳೆಯದಾಗಿರುವ



ಹಿನ್ನೆಲೆಯಲ್ಲಿ, ಮುಸ್ಲಿಂ ಸಮುದಾಯದ ಬಹುದಿನಗಳ ಬೇಡಿಕೆಯಾದ ನೂತನ ಜಾಮಿಯಾ ಮಸೀದಿ ಕಟ್ಟಡ ನಿರ್ಮಾಣ-ಕ್ಕೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಸಲ್ಲಿಸಲಾಯಿತು. ಅಲ್ಲದೆ, ಬೇರೆ ಸೂಕ್ತ ಜಾಗದಲ್ಲಿ ನೂತನ ಹೈಟೆಕ್ ಉರ್ದು ಶಾಲೆ ಮಂಜೂರು ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಾಲಹಳ್ಳಿ ಮುಸ್ಲಿಂ ಸಮುದಾಯದ ಬಹುದಿನಗಳ ಬೇಡಿಕೆಯಾಗಿರುವ ನೂತನ ಜಾಮಿಯಾ ಮಸೀದಿ ಕಟ್ಟಡ ನಿರ್ಮಾಣ-ಕ್ಕೂ ಆದಷ್ಟು ಬೇಗ ಅನುದಾನ ದೊರಕಿಸಲು ಸರ್ಕಾರದ ಮಟ್ಟದಲ್ಲಿ ಶಿಫಾರಸು ಹಾಗೂ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕಿ ಕ-ರಿಯಮ್ಮ ಜಿ. ನಾಯಕ್ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಾಲಹಳ್ಳಿ

**ಜಾಲಹಳ್ಳಿಯಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದ್ ಶಾಲೆಗೆ ಈಗಾಗಲೇ ಅನುದಾನ ಮನವಿಗೆ ಸ್ಪಂದಿಸಿದ ಶಾಸಕಿ ಕರಿಯಮ್ಮ ಜಿ. ನಾಯಕ್ ಅವರು, ಜಾಲಹಳ್ಳಿಯಲ್ಲಿ ಈಗಾಗಲೇ ಮೌಲಾನಾ ಅಬುಲ್ ಕಲಾಂ ಆಜಾದ್ ಶಾಲೆ ಮಂಜೂರಾಗಿ ಅನುದಾನ ಬಂದಿದ್ದು, ಶೀಘ್ರದಲ್ಲೇ ಕಟ್ಟಡ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.**

ಜಾಮಿಯಾ ಮಸೀದಿ ಅಧ್ಯಕ್ಷ ಬಾಬಾ ಮೆಡಿಕಲ್, ಉರ್ದು ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ನೂರುಲ್ ಹುಸೇನ್ ಆರತಿ, ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರಹಮಾನ್ ಖುರೇಶಿ, ಜೆಡಿಎಸ್ ಅಲ್ಪಸಂಖ್ಯಾತರ ಕಾರ್ಯದರ್ಶಿ ಮಕತೂಮ್ ಜಾಲಹಳ್ಳಿ, ಮುಖಂಡರಾದ ಇಮಾಮ್ ಸಾಬ್ ಉದ್ದಾರ, ಜಹೀರ್ ದರ್ವೇಶ್, ಮೌಲಾನಾ ಅಶ್ರಫ್, ಅಸ್ಫಾಕ್ ಮುಲ್ಲಾ, ಬಶೀರ್ ಅಹ್ಮದ್ ಮುಲ್ಲಾ ಸೇ-ರಿದಂತೆ ಜಾಲಹಳ್ಳಿ ಗ್ರಾಮದ ಹಲವು ಮುಸ್ಲಿಂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಕುಷ್ಟಗಿಯನ್ನು ಭೀಕರ ಬರ ತಾಲೂಕು ಎಂದು ಘೋಷಿಸಲು ಆಗ್ರಹ

## ಕೆರೆ ತುಂಬಿಸುವ ಯೋಜನೆ ಶೀಘ್ರ ಅನುಷ್ಠಾನಕ್ಕೆ ಒತ್ತಾಯಿಸಿ ಹನುಮಸಾಗರ ಬಂದ್

❏ ನೈಜ್ಯ ದೆಸೆ ನ್ಯೂಸ್

**ಹನುಮಸಾಗರ: ಕುಷ್ಟಗಿ ತಾಲೂಕನ್ನು ಭೀಕರ ಬರಪೀಡಿತ ತಾಲೂಕು ಎಂದು ಘೋಷಿಸಬೇಕು ಹಾಗೂ ಕಡೇಕೊಪ್ಪಮತ್ತು ಉಳಿದ ಕೆರೆ ತುಂಬಿಸುವ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿ ರೈತ ಸಂಘದ ನೇತೃತ್ವದಲ್ಲಿ ಮಂಗಳವಾರ ಹನುಮಸಾಗರ ಪಟ್ಟಣ ಬಂದ್ ನಡೆಸಲಾಯಿತು.**

ವಿವಿಧ ಸಂಘ-ಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿ ಪಟ್ಟಣವನ್ನು ಸಂಪೂರ್ಣ ಬಂದ್ ಮಾಡುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾಜಿ ತಾಲೂಕು ಬಿಜೆಪಿ ಅಧ್ಯಕ್ಷ ಬಸವರಾಜ ಹಳ್ಳೂರ ಮಾತನಾಡಿ, ತಾಲೂಕಿನಲ್ಲಿ ಭೀಕರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ರೈತರು ಸಾಲ-ಶೂಲ ಮಾಡಿ ಬಿತ್ತನೆ ಮಾಡಿದ ಬೆಳೆಗಳು ಮಳೆಯ ಕೊರತೆಯಿಂದ ಸಂಪೂರ್ಣ ನಾಶವಾಗಿವೆ. ಜಾನುವಾರುಗಳಿಗೆ ಮೇವಿನ ಕೊರತೆಯೂ ಎದುರಾಗಿದೆ. ಸರ್ಕಾರ ಕೂಡಲೇ ರೈತರ ಸಂಕಷ್ಟಕ್ಕೆ ಸ್ಪಂದಿಸಿ ನೆರವಿಗೆ ಬರಬೇಕು.

ರೈತರ ವಿಷಯದಲ್ಲಿ ರಾಜ-ಕೀಯ ಮಾಡದೆ ಕುಷ್ಟಗಿ ತಾಲೂಕನ್ನು ತಕ್ಷಣ ಬರಪೀಡಿತ ತಾಲೂಕು ಎಂದು ಘೋಷಿಸಬೇಕು ಎಂದು ಆಗ್ರಹಿಸಿದರು. ರೈತ ಮುಖಂಡ ನಜೀರಸಾಬ ಮೂಲಿಮನಿ ಮಾತನಾಡಿ, ಕಡೇಕೊಪ್ಪ ಸೇರಿದಂತೆ ಕೆರೆ ತುಂಬಿಸುವ ಯೋಜನೆಗೆ 2019-20ನೇ ಸಾಲಿನಲ್ಲಿ 498 ಕೋಟಿ ಮಂಜೂರಾಗಿದ್ದು, ಆರು ವರ್ಷ ಕಳೆದರೂ ಯೋಜನೆ ಪೂರ್ಣಗೊಂಡಿಲ್ಲ. ಸಣ್ಣಪುಟ್ಟ ಕಾಮಗಾರಿಗಳ ನೆಪದಲ್ಲಿ ಯೋಜನೆಯನ್ನು ವಿಳಂಬ ಮಾಡಲಾಗುತ್ತಿದೆ. ರೈತರಿಗೆ ಅನುಕೂಲವಾಗುವಂತೆ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಬೇಕು. ರೈತರ ಹಿತಕ್ಕಾಗಿ ಪಕ್ಷಾತೀತವಾಗಿ ಹೋರಾಟ ನಡೆಸಬೇಕಾಗಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಮಹಾಂತೇಶ



ಅಗಸಿಮುಂದಿನ, ಆರ್.ಕೆ. ದೇಸಾಯಿ, ಸೂಚೆಪ್ಪ ಬೋವಿ, ಶಿವಪುತ್ರಪ್ಪ ಕೋಳೂರು, ಬಸವರಾಜ ಬಾಚಲಾಪುರ, ಬಸವರಾಜ ದ್ಯಾವಣ್ಣವರ, ಯಮನೂರ ಮಡಿವಾಳರ, ಕಾಡಪ್ಪ ಮಡಿಕೇರಿ, ಮಲ್ಲಿಕಾರ್ಜುನ ದೋಟಿಹಾಳ, ಹನಮೇಶ ಶಾಕಾಪುರ, ಸಂಗಮ್ಮ ಗುಳೇಗೌಡ್ರ, ಮಹಾಂತೇಶ ಕುಷ್ಟಗಿ, ಈಶಪ್ಪ ಕಣ್ಣೂರ, ಸಗರಪ್ಪ ಕುಂಬಾರ ಸೇರಿದಂತೆ ಸುತ್ತಮುತ್ತಲಿನ ರೈತರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಪಾಲ್ಗೊಂಡಿದ್ದರು.

# ಮಹತ್ವಾಕಾಂಕ್ಷಿ ಯೋಜನೆಯಡಿ ಸಿರಿವಾರ ಹಾಗೂ ಲಿಂಗಸೂಗುರು ಆಸ್ಪತ್ರೆಗೆ ಕೇಂದ್ರ ಸರಕಾರದ ಉನ್ನತ ಅಧಿಕಾರಿಗಳ ಬೇಟಿ- ಮಹಿಳೆಯರ ಆರೋಗ್ಯ ಸುರಕ್ಷತೆಗೆ ಹೆಚ್ಚಿನ ಆಧ್ಯತೆ ನೀಡಿ.

❏ ನೈಜ್ಯ ದೆಸೆ ನ್ಯೂಸ್

**ಗ್ರಾಮೀಣ ಭಾಗದ ಮಹಿಳೆಯರು ತಮ್ಮ ವೈಯಕ್ತಿಕ ಅರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸುವ ದಿಶೆಯಲ್ಲಿ ಸೂಕ್ತ ಸಲಹೆ ಸೂಚನೆ, ಜಾಗೃತಿ, ಆಪ್ತ ಸಮಾಲೊಚನೆ ಕೈಗೊಳ್ಳಲು ಇದಕ್ಕಾಗಿ ಬೇಕಾಗುವ ನೇರವನ್ನು ಸೂಕ್ತ ಕ್ರಿಯಾ ಯೋಜನೆ ಸಿದ್ದಪಡಿಸಿ ಪಡೆದುಕೊಳ್ಳಲು ಕೇಂದ್ರ ವಾಣಿಜ್ಯ ಮತ್ತು ಕೈಗಾ-ರಿಕಾ ಸಚಿವಾಲಯದ ಜಂಟಿ ಕಾರ್ಯದರ್ಶಿ ಹಾಗೂ ಸಂಪೂರ್ಣತಾ ಮಹತ್ವಾಕಾಂಕ್ಷಿ ಕಾರ್ಯಕ್ರಮದ ಜಿಲ್ಲಾ ಉಸ್ತುವಾರಿ ಅಧಿಕಾರಿ ಉಜ್ವಲ್‌ಕುಮಾರ್ ಘೋಷ್ ತಿಳಿಸಿದರು.**

ಸಿರಿವಾರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಲಿಂಗಸೂಗೂರು ತಾಲೂಕಾ ಸಾರ್ವಜನಿಕ ಆಸ್ಪತ್ರೆಗೆ ಬೇಟಿ ನೀಡಿ, ಮೊದಲಿಗೆ ಸಿರಿವಾರದದಲ್ಲಿ ಚಿಕಿತ್ಸೆಗಾಗಿ ಆಗಮಿಸಿದ ತಾಯಂದಿರು, ಸಾರ್ವಜನಿಕರೊಂದಿಗೆ ಖುದ್ದು ಮಾತನಾಡಿದರಲ್ಲದೆ, ಹೆರಿಗೆಗೆ ಆಗಮಿಸಿದಾಗ ಗರ್ಭಿಣಿಯ ಅರೋಗ್ಯದ ಸ್ಥಿರತೆ, ಪ್ರತಿ ತಿಂಗಳು ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ ಗರ್ಭಿಣಿಯರ ತಪಾಸಣೆಯ ಕಾರ್ಯವಿಧಾನ, ಹೆರಿಗೆ ಕೊಠಡಿ,



ದಾಖಲಾತಿಗಳ ನಿರ್ವಹಣೆ ಪರಿಶೀಲಿಸಿ, ಗರ್ಭಿಣಿ ತಾಯಂದಿರಲ್ಲಿ ಕಂಡು ಬರುತ್ತಿರುವ ಅಧಿಕ ರಕ್ತದೊತ್ತಡದ ನಿಯಂತ್ರಣಕ್ಕಾಗಿ, ಆಹಾರ ಪದ್ಧತಿ, ಚಿಕಿತ್ಸಾ ವಿಧಾನಗಳು ಹಾಗೂ ಜೀವನ ಶೈಲಿಯಲ್ಲಿ ಮಾಡಬಹುದಾದ ಬದಲಾವಣೆಗಾಗಿ ಈಗಾಗಲೆ ರಾಜ್ಯಮಟ್ಟದಿಂದ ಪಡೆಯುತ್ತಿರುವ ತಾಂತ್ರಿಕ ಸಹಾಯವನ್ನು ಪರಿಣಾಮಕಾರಿಯಾಗಿ ವಿಶ್ಲೇಷಣೆ ಕೈಗೊಂಡು, ಈ ಭಾಗದ ಜನ-ರಿಗೆ ಹೆಚ್ಚಿನ ಜಾಗೃತಿ ನೀಡಲು ಸೂಚಿಸಿದರು.

ಲಿಂಗಸುಗೂರು ತಾಲೂಕಾ ಸಾರ್ವಜನಿಕರ ಆಸ್ಪತ್ರೆಯಲ್ಲಿ ಸಾರ್ವಜನಿಕ-ರಿಗೆ ಒದಗಿಸಲಾಗುತ್ತಿರುವ ಸಿಟಿ ಸ್ಕ್ಯಾನ್ ಸೌಲಭ್ಯದವನ್ನು ಪರಿಶೀಲಿಸಿದರಲ್ಲದೆ ಡಯಾಲಿಸೀಸ್, ಪೌಷ್ಟಿಕ ಪುನಶ್ಚೇತನ ಕೇಂದ್ರದಲ್ಲಿ ಮಕ್ಕಳ ಅರೈಕೆ, ಆಹಾರ ತಯಾರಿಕೆ, ತಾಯಂದಿರಿಗೆ ನೀಡುವ ಆಪ್ತಸಮಾಲೋಚನೆ ವಿಧಾನ, ಹಾಗೂ ತೀವ್ರ ನಿಘಾ ಘಟಕ (ಐಸಿಯು) ದ ಕಾರ್ಯಕ್ರಮತೆ ಪರಿಶೀಲಿಸಿ, ಚಿಕಿತ್ಸೆಯ ಅಗತ್ಯವುಳ್ಳ ಜನತೆ ಚಿಕಿತ್ಸೆಯು ವಿಳಂಬವಾಗದಂತೆ ನಿಗಾವಹಿಸಲು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಬರುವುದನ್ನು ಮನಗಂಡು ಬೇಕಾಗುವ ಮೂಲಭೂತ ಸೌಲಭ್ಯಗಳ ಒದಗಿಸಲು ಕ್ರಮಕ್ಕಾಗಿ ಪ್ರಸ್ತಾನೆ ಸಲ್ಲಿಸಲು ಸೂಚಿಸಿದರು.

ಈ ಸಂದರ್ಭಗಳಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ, ಮುಖ್ಯ ಯೋಜನಾಧಿಕಾರಿ ಡಾ ಟಿ ರೋಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್, ಡಿಡಿಪಿಐ ಮಲ್ಲಿಕಾರ್ಜುನ, ಕಾರ್ಯಪಾಲಕ ಅಭಿಯಂತರ ದೊರೆಸ್ವಾಮಿ, ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ ಜಾವೂರು, ಉಮೇಶ್, ತಾಲೂಕಾ ಆರೋಗ್ಯಾದಿಕಾರಿ ಡಾ ಶರಣಬಸವರಾಜ್, ಡಾ ಹನುಮಂತರಾಯ ತಳ್ಳಳ್ಳಿ, ಆಡಳಿತ ವೈದ್ಯಾಧಿಕಾರಿ ಡಾ ರುದ್ರಗೌಡ ಪಾಟೀಲ್, ವೈದ್ಯಾಧಿಕಾರಿ ಡಾ ಮೃತ್ಯುಂಜಯ, ಸೇರಿದಂತೆ ವೈದ್ಯರು ಹಾಗೂ ಇತರರು ಉಪಸ್ಥಿತರಿದ್ದರು.

# ಕಂಪ್ಲಿಯಲ್ಲಿ ನಡೆದ 'ವಚನ ಶ್ರಾವಣ' ಕಾರ್ಯಕ್ರಮ: ಶರಣರ ಸಿದ್ಧಾಂತಗಳ ದಿವ್ಯ ದರ್ಶನ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಇಲ್ಲಿನ ಜಾಗತಿಕ ಲಿಂಗಾಯತ ಮಹಾಸಭಾ ಹಾಗೂ ರಾಷ್ಟ್ರೀಯ ಬಸವ ದಳದ ಆಶ್ರಯದಲ್ಲಿ, ಪಟ್ಟಣದ ವಚನ ದಾಸೋಹಿ ಡಾ. ಸುನಿಲ್ ಬಿ. ಅವರ ನಿವಾಸದಲ್ಲಿ ಸೋಮವಾರ 'ವಚನ ಶ್ರಾವಣ' ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿ ಜರುಗಿತು. ಅಕ್ಕನ ಬಳಗದ ಅಧ್ಯಕ್ಷರಾದ ಡಾ. ಶಾರದಾ ಜಗನ್ನಾಥ ಹಿರೇಮಠ್ ಅವರು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. "ವಚನ ಸಾಹಿತ್ಯವು ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಬೇಕಿದೆ.**

ಇದು ಮನುಷ್ಯನಿಗೆ ಸರಳ ಹಾಗೂ ಸುಂದರವಾದ ಬದುಕನ್ನು ನಡೆಸಲು ಪ್ರೇರೇಪಿಸುತ್ತದೆ" ಎಂದು ಅವರು ಆಶಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಪ್ರಥಮ ಪ್ರವಚನ ನೀಡಿದ ಅಕ್ಕನ ಬಳಗದ ಕಾರ್ಯದರ್ಶಿ ಬಿ. ಎಂ. ಪುಷ್ಪ ಅವರು, 12ನೇ ಶತಮಾನದ ಶಿವಶರಣೆ ಅಕ್ಕಮಹಾದೇವಿಯವರ ವಚನಗಳ ಸಾರವನ್ನು ವಿವರಿಸಿದರು. "ಭಗವಂತನಿಗೆ ಕೇವಲ ಯಾಂತ್ರಿಕವಾಗಿ



ಮಾಡುವ ಬಾಹ್ಯ ಪೂಜೆಗಳಿಗಿಂತ ಆಂತರಿಕ ಭಕ್ತಿ ಮತ್ತು ಮನಸ್ಸಿನ ಶುದ್ಧತೆ ಅತ್ಯಂತ ಮುಖ್ಯ. ಅಕ್ಕಮಹಾದೇವಿಯವರ 'ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು' ಎಂಬ ವಚನವು ಇಂದಿನ ಸಮಾಜದ ಪ್ರದರ್ಶನ ಪ್ರಿಯತೆಗೆ ಕನ್ನಡಿ ಹಿಡಿಯುವಂತಿದೆ. ಮನುಷ್ಯನಲ್ಲಿ ಅಹಂಕಾರ ಕರಗದೆ ಮಾಡುವ ಅಭಿಷೇಕಕ್ಕೆ ಅರ್ಥವಿಲ್ಲ. ಕಾಯ, ವಾಚಾ, ಮನಸಾ ಒಂದಾಗುವ ತ್ರಿಕರಣ ಶುದ್ಧಿ ಇಲ್ಲದ ಪೂಜೆ ಕೇವಲ ಆಡಂಬರವಾಗುತ್ತದೆ" ಎಂದು ಮಾರ್ಮಿಕವಾಗಿ ನುಡಿದರು.

ದ್ವಿತೀಯ ಪ್ರವಚನ ನೀಡಿದ ಅಕ್ಕನ ಬಳಗದ ನಿರ್ದೇಶಕಿ ರಶ್ಮಿ ಕಲ್ಗುಡಿ ಅವರು, ಶಿವಶರಣೆ ಆಯ್ದಕ್ಕಿ ಲಕ್ಕಮ್ಮನವರ 'ಕಾಯಕ ನಿಂದಿತ್ತು ಹೋಗಯ್ಯ' ಎಂಬ ವಚನದ ಕುರಿತು ವಿಶೇಷ ಚಿಂತನೆ ನಡೆಸಿಕೊಟ್ಟರು. "'ಕಾಯಕವೇ ಕೈಲಾಸ' ಎಂಬ ತತ್ವಕ್ಕೆ ಹೊಸ ಭಾಷ್ಯ ಬರೆದ ಲಕ್ಕಮ್ಮನವರ ಜೀವನ ನಮಗೆ ಆದರ್ಶ. ಆಸೆಬುರುಕತನವನ್ನು ದೂರವಿಟ್ಟು, ಪ್ರಾಮಾಣಿಕತೆಯಿಂದ ಬದುಕುವ ಶರಣರ ಮಾರ್ಗವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕಿದೆ" ಎಂದು ತಿಳಿಸಿದರು.

ಅತಿಥಿಗಳಾದ ಶ್ರೀ ಬಂಗಿ ದೊಡ್ಡ ಮಂಜುನಾಥ, ವಚನ ಸಾಹಿತ್ಯದಲ್ಲಿ ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಕೂಡ ಪರಿಹಾರವಿದೆ, ಇಡೀ ಜಗತ್ತನ್ನೇ ಸೌಖ್ಯವಾಗಿಡುವ ಸೂತ್ರಗಳಿವೆ ಎಂಬ ವಿಚಾರವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾದ ಪಿ. ರುದ್ರಪ್ಪ, ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾ-ರಿಗಳು ಸಿಂಧನೂರು, ಇವರು ಶರಣ ಧರ್ಮದ ವಿಚಾರಧಾರೆಗಳನ್ನು ತಿಳಿಸಿದರು. ಪ್ರೊಫೆಸರ್ ಎಸ್. ಎ. ರವೀಂದ್ರನಾಥ್, ನಿವೃತ್ತ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಹೊಸಪೇಟೆ ಪ್ರೌಢದೇವರಾಯನ ಕಾಲದ ಶರಣ ಸಾಹಿತ್ಯವನ್ನು ಮತ್ತು ಆ ಕಾಲದಲ್ಲಿ ಆಧ್ಯ ವಚನ ಸಂರಚನೆಯನ್ನ ತಿಳಿಸಿದರು.

ಮಾವಿನಹಳ್ಳಿ ಬಸವರಾಜ್, ಅಧ್ಯಕ್ಷರು, ಜಾಗತಿಕ ಲಿಂಗಾಯತ ಮಹಾಸಭಾ ವಿಜಯನಗರ ಜಿಲ್ಲೆ ಇವರು ಮಾತನಾಡಿ ಶರಣ ಧರ್ಮ ಇಂದು ಕಟ್ಟಿಕೊಳ್ಳಬೇಕಾಗಿದೆ ಶರಣರ ಆಶಯಗಳಂತೆ ನಾವು ನಡೆದರೆ ಸಮಾನತೆಗೆ ಅವಕಾಶವಿದೆ ಎಂಬ ವಿಚಾರವನ್ನು ತಮ್ಮ ಮಾತುಗಳಲ್ಲಿ ತಿಳಿಸಿದರು. ಇನ್ನೋರ್ವ ವಿಶೇಷ ಆಹ್ವಾನಿತರಾದ ಬಸವ ಕಿರಣ ಕೃಪಾನಿಧಿ, ಬಸವ ಆಶ್ರಮ ಮಲಪನಗೊಡಿ ಇವರು ಶರಣರ ಮಾರ್ಗ ಕಷ್ಟದ ಮಾರ್ಗ ಆದರೆ ಅದು ಸಾಧನೆಯ ಮಾರ್ಗ ಎಂದು ಆಶಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶ್ರಾವಣ ವಚನ ಕಾರ್ಯಕ್ರಮದ ರೂವಾರಿ ಕೆ.. ಎಮ್. ಹೇಮಯ್ಯಸ್ವಾಮಿಗಳು, ಬಿ. ವೀರಣ್ಣ ನಿವೃತ್ತ ಶಿಕ್ಷಕರು, ಎಸ್ ಜಿ ಚಿತ್ರಗಾರ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್, ಕೆ ತಿಪ್ಪೇಸ್ವಾಮಿ, ಸಿಂಪಿ ಸಮಾಜದ ಅಧ್ಯಕ್ಷರು, ಹೆಚ್.ಜಿ. ಹಂಪಣ್ಣವರ್, ನಿವೃತ್ತ ಬಿಇಒ ಸಿಂಧನೂರು, ಅಶೋಕ ಕುಕುನೂರ್ ಸೇರಿದಂತೆ ಊರಿನ ಪ್ರಮುಖ ಗಣ್ಯರು ಭಾಗವಹಿಸಿದ್ದರು.

## ನೇಮಕಾತಿ ಪ್ರಕಟಣೆ

**KEA ನೇಮಕಾತಿ 2026 – 4699 ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 1, 2026**

KEA ನೇಮಕಾತಿ 2026: 4699 ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಅರ್ಜಿ ಪ್ರಕ್ರಿಯೆ ಪ್ರಾರಂಭವಾದ ನಂತರ ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ಅಧಿಸೂಚನೆ ಬಿಡುಗಡೆಯಾದ ನಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನವೀಕರಿಸಲಾಗುತ್ತದೆ. ಅಧಿಕೃತ ವೆಬ್‌ಸೈಟ್: cetonline.karnataka.gov.in

## ಶಾಸಕ ದರ್ಶನ್ ಧ್ರುವನಾರಾಯಣ್ ನಂಜನಗೂಡಿನ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿ (CDC) ಸಭೆ ಯಶಸ್ವಿ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಸೆಪ್ಟೆಂಬರ್ 8 ಶಾಸಕ ಶಾಸಕ ದರ್ಶನ್ ಧ್ರುವನಾರಾಯಣ್ ರವರು ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರವ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ , 2026–27ನೇ ಶೈಕ್ಷಣಿಕ ಸಾಲಿನ ಕಾಲೇಜಿನ ಅಭಿವೃದ್ಧಿ ಕಾರ್ಯಗಳು ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕುರಿತು ಸಮಗ್ರ ಸಮಾಲೋಚನೆ ಸಭೆ ನಡೆಸಿ ಶಾಸಕರು ಮಾಹಿತಿ ಪಡೆದುಕೊಂಡರು**



ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಮಾತನಾಡಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ಹಂತ ಹಂತವಾಗಿ ಬಗೆಹರಿಸುವುದು, ಕಾಲೇಜಿನ ಶೈಕ್ಷಣಿಕ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸುವುದು ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು ಸಭೆಯಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ ರವರು, ಪ್ರಾಂಶುಪಾಲರಾದ ಪಿ. ಶಿವಣ್ಣ ರವರು, ಮಾಜಿ ನಗರಸಭಾ ಅಧ್ಯಕ್ಷರಾದ ಶ್ರೀಕಂಠ ಸ್ವಾಮಿ ರವರು, ನಗರ ಬ್ಲಾಕ್ ಅಧ್ಯಕ್ಷರಾದ ಸಿ. ಎಂ ಶಂಕರ್ ರವರು, ಮಹೇಶ್ ರವರು, ಸೋಮಣ್ಣ ರವರು, ಕೃಷ್ಣಪ್ಪ ರವರು, ರಮೇಶ್ ರವರು, ಡಾ. ಈಶ್ವರ ಕನಕೆ. ಗುರುಮಾಲ್ಲಪ್ಪ ರವರು, ಋಷವೇಂದ್ರ ರವರು, ಯಶವಂತ್ ರವರು, ಹಾಜರಿದ್ದರು

## ಸ್ಮರಣ ಸಂಚಿಕೆಗೆ ಚುಟುಕುಗಳ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನಲ್ಲಿ ಸೆ. 26ರಂದು ನಡೆಯಲಿರುವ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನದ ಅಂಗವಾಗಿ ಸ್ಮರಣ ಸಂಚಿಕೆ ಹೊರತರಲು ಸಂಘಟಕರು ನಿರ್ಧರಿಸಿದ್ದಾರೆ. ಸ್ಮರಣ ಸಂಚಿಕೆಯಲ್ಲಿ ತಾಲೂಕಿನ ಚುಟುಕು ಕವಿಗಳ ಸ್ವರಚಿತ ಚುಟುಕುಗಳನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ.



ಈ ಹಿನ್ನೆಲೆಯಲ್ಲಿ ತಾಲೂಕಿನ ಚುಟುಕು ಕವಿಗಳು ತಮ್ಮ ಮೂರು ಸ್ವರಚಿತ ಚುಟುಕುಗಳನ್ನು ವೈಯಕ್ತಿಕ ಮಾಹಿತಿಯೊಂದಿಗೆ ಸೆ. 15ರೊಳಗೆ ಸಲ್ಲಿಸಬೇಕು ಎಂದು ಚುಟುಕು ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಮಹೇಶ ಹಡಪದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕವಿಗಳು ತಮ್ಮ ಕೃತಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವ ಮೂಲಕ ಸ್ಮರಣ ಸಂಚಿಕೆಯ ಯಶಸ್ಸಿಗೆ ಸಹಕರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ. ಸಂಪರ್ಕಕ್ಕಾಗಿ: ಮಹೇಶ ಹಡಪದ, ಅಧ್ಯಕ್ಷರು 77951 72462 ವಿಶ್ವನಾಥ್ ಅಂಬ್ಲಿ ಕೊಪ್ಪಮಠ, ಪ್ರಧಾನ ಕಾರ್ಯದರ್ಶಿ 94815 50013 ವೆಂಕಟೇಶ ಚಾಗಿ, ಸಂಘಟನಾ ಕಾರ್ಯದರ್ಶಿ 96113 11195 ಬೀರಪ್ಪ ಕಡ್ಲಿಮಟ್ಟಿ, ಗೌರವ ಕಾರ್ಯದರ್ಶಿ 80501 95674

# ಚರ್ಮಗಂಟು ರೋಗ ತಡೆಗೆ ಜಾನುವಾರುಗಳಿಗೆ ಲಸಿಕೆ

## ಮಳೆಗಾಲದಲ್ಲಿ ರೋಗದ ಭೀತಿ ರೈತರು ಮುಂಜಾಗ್ರತೆ ವಹಿಸಲು ಪಶು ವೈದ್ಯಾಧಿಕಾರಿ ಸಲಹೆ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಎಂ.ಗುಡದೂರು ಗ್ರಾಮದಲ್ಲಿ ಜಾನುವಾರುಗಳಿಗೆ ಚರ್ಮಗಂಟು ರೋಗ ಹರಡುವುದನ್ನು ತಡೆಗಟ್ಟುವ ಉದ್ದೇಶದಿಂದ ಮುಂಜಾಗ್ರತಾ ಕ್ರಮವಾಗಿ ಲಸಿಕಾ ಕಾರ್ಯಕ್ರಮ ನಡೆಸಲಾಯಿತು.**



ಈ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಪಶು ವೈದ್ಯಾಧಿಕಾರಿ ಡಾ. ಸಿದ್ಧಲಿಂಗಯ್ಯ ಶಂಕೀನ್, ಚರ್ಮಗಂಟು ರೋಗವು ವೈರಾಣುಜನ್ಯ ಸಾಂಕ್ರಾಮಿಕ ರೋಗವಾಗಿದ್ದು, ಸೊಳ್ಳೆ, ಉಣ್ಣೆ ಹಾಗೂ ಇತರ ಕೀಟಗಳ ಕಚ್ಚುವಿಕೆಯಿಂದ ಜಾನುವಾರುಗಳಿಗೆ ಹರಡುತ್ತದೆ. ಮಳೆಗಾಲದಲ್ಲಿ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ರೈತರು ಮುಂಜಾಗ್ರತಾ ಕ್ರಮವಾಗಿ ಜಾನುವಾರುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು ಎಂದು ತಿಳಿಸಿದರು.

ಜಾನುವಾರುಗಳ ಕೊಟ್ಟಿಗೆ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ಕೀಟಗಳ ನಿಯಂತ್ರಣಕ್ಕಾಗಿ ಸಾಯಂಕಾಲ ಕೊಟ್ಟಿಗೆ ಸುತ್ತಮುತ್ತ ಹಸಿಬೇವಿನ ಸೊಪ್ಪಿನ ಹೊಗೆ ಹಾಕುವುದು ಹಾಗೂ ಸೊಳ್ಳೆ ಪರದೆ ಅಳವಡಿಸುವುದು ಸೇರಿದಂತೆ ಅಗತ್ಯ ಮುನ್ನೆಚ್ಚ–ರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದರು. ರೋಗದ ಲಕ್ಷಣಗಳು: ಸೋಂಕಿತ ಜಾನುವಾರುಗಳಲ್ಲಿ ಅತಿಯಾದ ಜ್ವರ, ಚರ್ಮದ ಮೇಲೆ 2ರಿಂದ 5 ಸೆಂ.ಮೀ. ಅಗಲದ ಗಂಟುಗಳು ಕಾಣಿಸಿಕೊಳ್ಳುವುದು, ಗಂಟುಗಳು ಒಡೆದು ಗಾಯವಾಗುವುದು, ಕಣ್ಣುಗಳಿಂದ ನೀರು ಸೋರುವುದು, ಕಾಲುಗಳಲ್ಲಿ ಬಾವು ಹಾಗೂ ನಿಶ್ಯಕ್ತಿ ಕಂಡುಬರುತ್ತವೆ. ಹಾಲಿನ ಇಳುವರಿ ಕಡಿಮೆಯಾಗುವುದಲ್ಲದೆ, ಎತ್ತುಗಳ ಕೆಲಸದ ಸಾಮರ್ಥ್ಯವೂ ಕುಂಠಿತವಾಗುತ್ತದೆ. ಗರ್ಭಿಣಿ ಹಸುಗಳಲ್ಲಿ ಗರ್ಭಪಾತವಾಗುವ ಸಾಧ್ಯತೆ ಇದ್ದು, ಕರುಗಳಲ್ಲಿ ರೋಗ ತೀವ್ರವಾದರೆ ಸಾವಿಗೂ ಕಾರಣವಾಗಬಹುದು ಎಂದು ಹೇಳಿದರು.

ರೋಗಗ್ರಸ್ತ ಜಾನುವಾರುಗಳಿಂದ ಆರೋಗ್ಯವಂತ ಜಾನುವಾರುಗಳಿಗೆ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ರೋಗಪೀಡಿತ ಜಾನುವಾರುಗಳನ್ನು ಪ್ರತ್ಯೇಕವಾಗಿ ಕಟ್ಟಬೇಕು. ಅವುಗಳಿಗೆ ಮೇವು ಹಾಗೂ ನೀರನ್ನು ಪ್ರತ್ಯೇಕವಾಗಿ ನೀಡಬೇಕು ಎಂದು ಸಲಹೆ ನೀಡಿದರು. ರೈತರು ಸಮೀಪದ ಪಶು ಚಿಕಿತ್ಸಾ ಕೇಂದ್ರವನ್ನು ಸಂಪರ್ಕಿಸಿ ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಡಾ. ಸಿದ್ಧಲಿಂಗಯ್ಯ ಶಂಕೀನ್ ಮನವಿ ಮಾಡಿದರು. ಈ ಸಂದರ್ಭದಲ್ಲಿ ಎಂ.ಗುಡದೂರು ಗ್ರಾಮದ ಪರಮಪೂಜ್ಯ ಶ್ರೀ ನೀಲಕಂಠಯ್ಯ ತಾತನವರು, ಪಶುಪಾಲನಾ ಇಲಾಖೆಯ ಸಿಬ್ಬಂದಿಗಳಾದ ಸೌಮ್ಯ ಕುದರಿಮೋತಿ, ವೀರೇಶ್ ರಾಂಪುರ, ಪಶುಸಖಿ ನಿರ್ಮಲಾ ಹಾಗೂ ಗ್ರಾಮದ ರೈತರು ಉಪಸ್ಥಿತರಿದ್ದರು.

## ಪತ್ರಿಕೋದ್ಯಮ, ಸಾಹಿತ್ಯ ಹಾಗೂ ಸಮಾಜಸೇವೆಯ ಸಾಧಕ ಆನಂದ್ ಸಿ. ತಿರುಮಲ 'ಕಾವ್ಯಶ್ರೀ' ಪ್ರಶಸ್ತಿಗೆ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ ಸೆಪ್ಟೆಂಬರ್ 8ಪತ್ರಿಕೋದ್ಯಮ, ಶಿಕ್ಷಣ, ಸಾಹಿತ್ಯ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ಸಲ್ಲಿಸಿರುವ ಅನನ್ಯ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ (ರಿ.), ಕರ್ನಾಟಕ ವತಿಯಿಂದ ಈ ಪ್ರಶಸ್ತಿಗೆ ಆನಂದ್ ಸಿ. ತಿರುಮಲ ಅವರನ್ನು ಆಯ್ಕೆ ಮಾಡಲಾಗಿದೆ.**



ಧಾರವಾಡ: ಕಾವ್ಯಶ್ರೀ ಚಾ–ರಿಟಬಲ್ ಟ್ರಸ್ಟ್ (ರಿ.), ಕರ್ನಾಟಕ ವತಿಯಿಂದ ಸೆಪ್ಟೆಂಬರ್ 12ರಂದು ಧಾರವಾಡದ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ನಡೆಯಲಿರುವ ಕಾವ್ಯಶ್ರೀ ಶಿಕ್ಷಕರ ಸಾಹಿತ್ಯ ಸಮ್ಮೇಳನ?2026ರಲ್ಲಿ ಪತ್ರಕರ್ತ, ಶಿಕ್ಷಣ ತಜ್ಞ, ಕವಿ, ಸಾಹಿತಿ ಹಾಗೂ ಸಮಾಜಸೇವಕರಾದ ಆನಂದ್ ಸಿ. ತಿರುಮಲ ಅವರಿಗೆ 'ರಾಷ್ಟ್ರಕವಿ ಕುವೆಂಪು ಪ್ರಶಸ್ತಿ' ನೀಡಲು ಆಯ್ಕೆ ಮಾಡಲಾಗಿದೆ. ಸಂಸ್ಥೆಯ ಆಯೋಜಕರು ತಿಳಿಸಿದ್ದಾರೆ ಪತ್ರಿಕೋದ್ಯಮ, ಶಿಕ್ಷಣ, ಸಾಹಿತ್ಯ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ಸಲ್ಲಿಸಿರುವ ಅನನ್ಯ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ (ರಿ.), ಕರ್ನಾಟಕ ವತಿಯಿಂದ ಈ ಪ್ರಶಸ್ತಿಗೆ ಆನಂದ್ ಸಿ. ತಿರುಮಲ ರವರು ತಮ್ಮನ್ನು ಗುರುತಿಸಿ ಆಯ್ಕೆ ಮಾಡುವುದಕ್ಕೆ ಸಂತಸ ವ್ಯಕ್ತಪಡಿಸಿದರು ಸೆಪ್ಟೆಂಬರ್ 12ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನಡೆಯಲಿರುವ ಸಮ್ಮೇಳನದಲ್ಲಿ ಕೃತಿ ಬಿಡುಗಡೆ, ಕವಿಗೋಷ್ಠಿ, ವಿಚಾರಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

ಸಮ್ಮೇಳನದ ಕಾರ್ಯಕ್ರಮದಲ್ಲಿ ಡಾ. ಸಿದ್ದಣ್ಣ ಬಾಡಗಿ ಅಧ್ಯಕ್ಷತೆ ವಹಿಸಲಿದ್ದು, ಡಾ. ರಮೇಶ್ ಮಹದೇವಪ್ಪನವರ, ಡಾ. ಧನವಂತ ಹಾಜವಗೋಳ, ಪ್ರೊ. ಪ್ರವೀಣ ವಿ. ಕುಲಕರ್ಣಿ, ಶ್ರೀಮತಿ ಸಂಗೀತಾ ಮಠಪತಿ, ಡಾ. ಶಾಂತಣ್ಣವಾಯ್ ಕಡಿವಾಲ, ಶ್ರೀ ಡಿ.ಎಚ್. ಅಂದಲಗಿ, ಶ್ರೀಮತಿ ಕೀರ್ತಿ ಮಠಪತಿ ಹಾಗೂ ಶ್ರೀಮತಿ ಹೇಮಾವತಿ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಶಿಕ್ಷಣ?ಸಾಹಿತ್ಯ ಕ್ಷೇತ್ರದ ಪ್ರಮುಖರು ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಆನಂದ್ ಸಿ. ತಿರುಮಲ ಅವರ 'ಭಾವ ವಿಕಾಸ' ಕವನ ಸಂಕಲನ ಕೃತಿ ಬಿಡುಗಡೆ ಕಾರ್ಯಕ್ರಮವೂ ನಡೆಯಲಿದ್ದು, ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಲಿದೆ. ಆನಂದ್ ಸಿ. ತಿರುಮಲ ಅವರು ಎನ್.ಇ.ಟಿ. ಎಜುಕೇಶನ್ ಅಕಾಡೆಮಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದರ ಜೊತೆಗೆ ಪತ್ರಕರ್ತ, ಕವಿ, ಸಾಹಿತಿ, ಶಿಕ್ಷಣ ತಜ್ಞ ಹಾಗೂ ಸಮಾಜಸೇವಕರಾಗಿ ಗುರುತಿಸಿಕೊಂಡಿದ್ದಾರೆ. ಧಾರವಾಡದಲ್ಲಿ ನಡೆಯಲಿರುವ ಈ ಸಾಹಿತ್ಯ ಸಮ್ಮೇಳನದಲ್ಲಿ 'ಭಾವ ವಿಕಾಸ' ಕವನ ಸಂಕಲನದ ಬಿಡುಗಡೆ ಹಾಗೂ 'ರಾಷ್ಟ್ರಕವಿ ಕುವೆಂಪು ಪ್ರಶಸ್ತಿ'ಗೆ ಆಯ್ಕೆಯಾಗಿರುವ ಆನಂದ್ ಸಿ. ತಿರುಮಲ ಅವರ ಗೌರವ ವಿಶೇಷ ಗಮನ ಸೆಳೆಯಲಿದೆ.

# ಜಾಲಹಳ್ಳಿ ಮುಖ್ಯ ರಸ್ತೆಗೆ ರೋಡ್ ಹಂಪ್ಸ್ ಅಳವಡಿಸಲು ಒತ್ತಾಯ


## ಲೋಕೋಪಯೋಗಿ ಇಲಾಖೆಗೆ ಗ್ರಾಮ ಪಂಚಾಯಿತಿಸದಸ್ಯರು ಹಾಗೂ ಗ್ರಾಮಸ್ಥರಿಂದ ಮನವಿ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಮುಖ್ಯ ರಸ್ತೆಯಾದ ಪಿ.ಕೆ.ಜಿ.ಬಿ ಬ್ಯಾಂಕ್‌ನಿಂದ ಲಿಂಗದಹಳ್ಳಿ ಕ್ರಾಸ್‌ವರೆಗೆ ಅಗತ್ಯವಿರುವ ಕಡೆಗಳಲ್ಲಿ ರಸ್ತೆ ಹಂಪ್ಸ್‌ಗಳನ್ನು ಅಳವಡಿಸುವಂತೆ ಒತ್ತಾಯಿಸಿ ಜಾಲಹಳ್ಳಿ ಗ್ರಾಮ ಪಂಚಾಯಿತಿಸದಸ್ಯರು ಹಾಗೂ ಗ್ರಾಮಸ್ಥರು ರಾಯಚೂರಿನ ಲೋಕೋಪಯೋಗಿ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಿದರು.**

ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಈ ಕುರಿತು ಚರ್ಚಿಸಿ, ರಸ್ತೆ ಹಂಪ್ಸ್ ಅಳವಡಿಸಲು ಕ್ರಮ ಕೈಗೊಳ್ಳುವಂತೆ ನಿರ್ಣಯ ಕೈಗೊಳ್ಳಲಾಗಿತ್ತು. ಬಳಿಕ ದೇವದುರ್ಗ ಲೋಕೋಪಯೋಗಿ ಇಲಾಖೆಯ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಈ ಕುರಿತು ಪತ್ರ ಸಲ್ಲಿಸಲಾಗಿದ್ದರೂ, ಇದುವರೆಗೆ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು.

ಜಾಲಹಳ್ಳಿ ಮುಖ್ಯ ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿದ್ದು, ರಸ್ತೆ ಹಂಪ್ಸ್‌ಗಳ ಕೊರತೆಯಿಂದ ವೇಗವಾಗಿ ಸಂಚರಿಸುವ ವಾಹನಗಳಿಂದ ಅಪಘಾತಗಳ ಅಪಾಯ ಹೆಚ್ಚಾಗಿದೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಕೂಡಲೇ ರಸ್ತೆ ಹಂಪ್ಸ್ ಅಳವಡಿಸಿ, ಸಂಭವಿಸಬಹುದಾದ ಅನಾಹುತಗಳನ್ನು ತಪ್ಪಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



ಮನವಿಗೆ ಸ್ಪಂದಿಸದೆ ನಿರ್ಲಕ್ಷ್ಯ ವಹಿಸಿದಲ್ಲಿ ಜಾಲಹಳ್ಳಿ ಗ್ರಾಮದ ಸಾರ್ವಜನಿಕರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಒಗ್ಗೂಡಿ ಲೋಕೋಪಯೋಗಿ ಇಲಾಖೆಯ ಕಚೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ದರದೇಸಾಯಿ, ಶಂಕರ್‌ಗೌಡ ಮಾಲಿಪಾಟೀಲ್, ವೆಂಕೋಬ ತೋಟದ್, ಜಾಲಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವೀರೇಶ್ ಅರಕೇರಿ, ಸದಸ್ಯರಾದ ಅಬ್ದುಲ್ ರಹಮಾನ್ ಖುರೇಶಿ ಹಾಗೂ ಸಲಬಣ್ಣ ಹಂಪರಗುಂದಿ ಸೇ–ರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಯಶವಂತಪುರ ಎಪಿಎಂಸಿಯಲ್ಲಿ ಸಿಎಂ ಎದುರು ಸಮಸ್ಯೆಗಳ ಸರಮಾಲೆ ಬಿಚ್ಚಿಟ್ಟ ರೈತರು

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಬೆಳ್ಳಂಬೆಳಗ್ಗೆ ನಗರದ ಯಶವಂತಪುರ ಎಪಿಎಂಸಿ ಮಾರುಕಟ್ಟೆಗೆ ದಿಢೀರ್ ಭೇಟಿ ನೀಡಿ, ರೈತರು, ವರ್ತಕರು ಹಾಗೂ ಮಂಡಿ ಮಾಲೀಕರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ರೈತರು ಬೆಳೆ ವಿಮೆ, ಈರುಳ್ಳಿ ಬೆಲೆ, ತೂಕದಲ್ಲಿ ವಂಚನೆ, ಕಮಿಷನ್ ಹಾಗೂ ವಿದ್ಯುತ್ ಸಂಪರ್ಕ ಸೇರಿದಂತೆ ಹಲವು ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರು.**



ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಇಟ್ಟನಹಳ್ಳಿ ಗ್ರಾಮದ ರೈತರೊಬ್ಬರು, ಬೆಳೆ ವಿಮೆಗಾಗಿ ಸ್ವಸಹಾಯ ಸೊಸೈಟಿಗೆ ಹಣ ಪಾವತಿಸಿದ್ದರೂ, ಸೊಸೈಟಿ ಡಿಸಿಸಿ ಬ್ಯಾಂಕ್‌ಗೆ ಹಣ ಪಾವತಿಸದ ಹಿನ್ನೆಲೆಯಲ್ಲಿ ವಿಮೆ ತಿರಸ್ಕೃತಗೊಂಡಿರುವ ಸಂದೇಶ ಬಂದಿದೆ ಎಂದು ಸಿಎಂಗೆ ಅಳಲು ತೋಡಿಕೊಂಡರು. ರೈತರು ವಿಮೆಗಾಗಿ ಹಣ ಪಾವತಿಸಿರುವ ಪಟ್ಟಿಯನ್ನು ಪರಿಶೀಲಿಸಿದ ಮುಖ್ಯಮಂತ್ರಿ, 93 ರೈತರಿಗೆ ಬೆಳೆ ವಿಮೆ ದೊರೆಯದಿರುವ ಪ್ರಕರಣದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಯನ್ನು ತಕ್ಷಣ ವಜಾಗೊಳಿಸುವಂತೆ ಸೂಚಿಸಿದರು. ಈರುಳ್ಳಿ ಬೆಳೆಗಾರರ ಸಮಸ್ಯೆ ಆಲಿಕೆ ಮಾರುಕಟ್ಟೆಗೆ ಈರುಳ್ಳಿ ಸೇರಿದಂತೆ ಕೃಷಿ ಉತ್ಪನ್ನಗಳನ್ನು ತಂದಿದ್ದ ರೈತರೊಂದಿಗೆ ಸಿಎಂ ಸುದೀರ್ಘವಾಗಿ ಮಾತುಕತೆ ನಡೆಸಿದರು. ಈರುಳ್ಳಿ ಸಾಗಿಸುವಾಗ ಪೊಲೀಸರು ತಡೆಯುತ್ತಾರೆಯೇ, ಎಪಿಎಂಸಿಯಲ್ಲಿ ರೈತ–ರಿಗೆ ಸಕಾಲದಲ್ಲಿ ಹಣ ಪಾವತಿಸಲಾಗುತ್ತಿದೆಯೇ, ವರ್ತಕರು ಎಷ್ಟು ಕಮಿಷನ್ ಪಡೆಯುತ್ತಾರೆ, ಪ್ರತಿ ಎಕರೆಗೆ ಎಷ್ಟು ಖರ್ಚಾಗುತ್ತದೆ ಹಾಗೂ ಬೆಳೆಯ ತೂಕವನ್ನು ಸರಿಯಾಗಿ ಮಾಡಲಾಗುತ್ತಿದೆಯೇ ಎಂಬುದನ್ನು ವಿಚಾರಿಸಿದರು. ಈ ವೇಳೆ ಸಿಎಂ ಅವರೇ ಖುದ್ದಾಗಿ ಈರುಳ್ಳಿ ಚೀಲಗಳ ತೂಕವನ್ನು ಪರಿಶೀಲಿಸಿದರು. ಕಲಬುರಗಿ, ಬೀದರ್ ಹಾಗೂ ವಿಜಯಪುರ ಮಾರುಕಟ್ಟೆಗಳಲ್ಲಿ ಪ್ರತಿ ಕ್ವಿಂಟಲ್‌ಗೆ 8ರಿಂದ 10 ರೂ.ವರೆಗೆ ಕಮಿಷನ್ ಪಡೆಯಲಾಗುತ್ತದೆ. ಆದ–'ರೆ ಯಶವಂತಪುರ ಮಾರುಕಟ್ಟೆಯಲ್ಲಿ ರೈತರಿಂದ ಕಮಿಷನ್ ಪಡೆಯುವುದಿಲ್ಲ. ಹೀಗಾಗಿ ನಾವು ಇಲ್ಲಿಗೆ ಈರುಳ್ಳಿ ತರುತ್ತೇವೆ ಎಂದು ರೈತರು ತಿಳಿಸಿದರು.

ಮಳೆ ಕೊರತೆಯಿಂದ ಈ ಬಾರಿ ಈರುಳ್ಳಿ ಇಳುವರಿ ಗಣನೀಯವಾಗಿ ಕುಸಿದಿದೆ. ಸಾಮಾನ್ಯವಾಗಿ ಎಕರೆಗೆ 150ರಿಂದ 200 ಚೀಲ ಇಳುವರಿ ಬರುತ್ತಿದ್ದರೆ, ಈ ಬಾರಿ ಕೇವಲ 50 ಚೀಲದಷ್ಟು ಮಾತ್ರ ದೊರೆತಿದೆ ಎಂದು ರೈತರು ಹೇಳಿದರು. ಮತ್ತೊಂದೆಡೆ, ಹೆಚ್ಚು ಮಳೆಯಾದರೆ ಜಮೀನಿನಲ್ಲೇ ಈರುಳ್ಳಿ ಕೊಳೆಯುವ ಸಾಧ್ಯತೆಯಿದ್ದು, ಮಾರುಕಟ್ಟೆಗೆ ಸಾಗಿಸುವ ವೆಚ್ಚಕ್ಕೂ ತಕ್ಕ ಬೆಲೆ ಸಿಗದ ಪರಿಸ್ಥಿತಿ ಎದುರಾಗುತ್ತದೆ ಎಂದು ಅಳಲು ತೋಡಿಕೊಂಡರು. ಹೆಕ್ಟೇರ್‌ಗೆ –6,500 ವಿಮೆ ಕಟ್ಟಿದರೂ ಪರಿಹಾರವಿಲ್ಲ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರೈತರೊಬ್ಬರು, ಬೆಳೆಗೆ ಹೆಕ್ಟೇರ್‌ಗೆ 6,500 ರೂ. ವಿಮೆ ಪಾವತಿಸಿದ್ದರೂ ಯಾವುದೇ ಪರಿಹಾರ ದೊರೆತಿಲ್ಲ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಈ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಕ್ರಮ ಕೈಗೊಳ್ಳುವಂತೆ ಸಿಎಂ ಅಧಿಕಾರಿಗಳಿಗೆ ಸೂಚಿಸಿದರು.

ಕಮಿಷನ್ ಹೆಚ್ಚಿಗೆ ಪಡೆದರೆ ಕ್ರಮ ಎಪಿಎಂಸಿ ಮಂಡಿ ವರ್ತಕರೊಂದಿಗೆ ಮಾತುಕತೆ ನಡೆಸಿದ ಮುಖ್ಯಮಂತ್ರಿ, ಎಪಿಎಂಸಿಗೆ ಎಷ್ಟು ಮೊತ್ತ ಪಾವತಿಸುತ್ತೀರಿ ಎಂದು ಪ್ರಶ್ನಿಸಿದರು. ಇದಕ್ಕೆ ಓರ್ವ ವರ್ತಕರು ಪ್ರತಿ 100 ರೂ.ಗೆ 60 ಪೈಸೆ ಪಾವತಿಸುತ್ತೇವೆ ಎಂದರೆ, ಮತ್ತೋರ್ವ ವರ್ತಕರು ಒಂದು ರೂ. ಪಾವತಿಸುತ್ತೇವೆ ಎಂದು ತಿಳಿಸಿದರು. ರೈತರಿಂದ ನಿಗದಿಗಿಂತ ಹೆಚ್ಚಿನ ಮೊತ್ತ ವಸೂಲಿ ಮಾಡಿದರೆ ತಮ್ಮ ಗಮನಕ್ಕೆ ತರುವಂತೆ ಸೂಚಿಸಿದ ಸಿಎಂ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.ಕೆಲವರು ಎಪಿಎಂಸಿ ಮಾರುಕಟ್ಟೆಗೆ ಉತ್ಪನ್ನಗಳನ್ನು ತರದೆ, ನೇರವಾಗಿ ರೈತ–ರಿಂದ ಖರೀದಿಸುತ್ತಾರೆ. ಈ ವೇಳೆ ಬೆಲೆ ನಿಗದಿಪಡಿಸಿ, ತೂಕದಲ್ಲಿ ಕಡಿಮೆ ತೋರಿಸಿ ಉತ್ಪನ್ನಗಳನ್ನು ಖರೀದಿಸುತ್ತಾರೆ ಎಂದು ರೈತರು ದೂರಿದರು.

ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ, ರೈತರಿಂದ ನೇರವಾಗಿ ಖರೀದಿ ಮಾಡುವವರು ತೂಕದಲ್ಲಿ ವಂಚನೆ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯುತ್ ಸಂಪರ್ಕಕ್ಕೆ ಮನವಿ ಕೂಡ್ಲಿಗಿ ತಾಲ್ಲೂಕಿನ ಹೊಸಹಟ್ಟಿ ಗ್ರಾಮದ ಈರುಳ್ಳಿ ಬೆಳೆಗಾರ ಆಂಜನಪ್ಪ ಅವರೊಂದಿಗೆ ಮಾತನಾಡಿದ ಸಿಎಂ, ನೀರಿನ ವ್ಯವಸ್ಥೆ ಹೇಗಿದೆ ಎಂದು ವಿಚಾ–ರಿಸಿದರು.ತೋಟದಲ್ಲಿ ಮನೆ ನಿರ್ಮಿಸಿಕೊಂಡಿದ್ದು, ವಿದ್ಯುತ್ ಸಂಪರ್ಕಕ್ಕಾಗಿ ಮೂರು ಬಾರಿ ಅರ್ಜಿ ಸಲ್ಲಿಸಿದರೂ ಇನ್ನೂ ಸಂಪರ್ಕ ದೊರೆತಿಲ್ಲ. ತಮ್ಮೊಬ್ಬರ ಸಮಸ್ಯೆಯಲ್ಲ, ಇದೇ ರೀತಿಯಾಗಿ ಹತ್ತಾರು ಮನೆಗಳಿಗೆ ವಿದ್ಯುತ್ ಸಂಪರ್ಕದ ಸಮಸ್ಯೆ ಇದೆ ಎಂದು ರೈತರು ತಿಳಿಸಿದರು. ಪ್ರಜಾಸೇವಾ ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಬಹುದಿತ್ತಲ್ಲವೇ ಎಂದು ಸಿಎಂ ಪ್ರಶ್ನಿಸಿದರು. ಯಾವುದೇ ಆತಂಕಪಡಬೇಕಿಲ್ಲ. ಎಲ್ಲ ಅರ್ಹ ಮನೆಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ರೈತರೊಂದಿಗೆ ನೇರವಾಗಿ ಸಂವಾದ ನಡೆಸಿದ ಮುಖ್ಯಮಂತ್ರಿಗಳ ಈ ದಿಢೀರ್ ಭೇಟಿ ವೇಳೆ, ಮಾರುಕಟ್ಟೆಯಲ್ಲಿನ ಬೆಳೆ ಮಾರಾಟ, ತೂಕ, ಕಮಿಷನ್, ಬೆಳೆ ವಿಮೆ ಹಾಗೂ ಮೂಲಸೌಕರ್ಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳು ಬೆಳಕಿಗೆ ಬಂದವು.

## ವಚನ ದರ್ಶನ

ನುಡಿದರೆ ಮುತ್ತಿನ ಹಾರದಂತಿರಬೇಕು,ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.ನುಡಿಯೊಳಗಾಗಿ ನಡೆಯದಿದ್ದರೆ,ಕೂಡಲಸಂಗಮದೇವನೆಂತೊಲಿವನಯ್ಯ?

12ನೆಯ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ವಿಶ್ವಗುರು ಬಸವಣ್ಣನವರು ಬರೆದ ಅತ್ಯಂತ ಜನಪ್ರಿಯ ಹಾಗೂ ಮಾರ್ಗದರ್ಶಕವಾದ ವಚನ ಸಾಹಿತ್ಯದ ಒಂದು ಭಾಗವಾಗಿದೆ. ಮನುಷ್ಯನ ಮಾತು ಮತ್ತು ನಡತೆ ಹೇಗಿರಬೇಕು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು.ನಮ್ಮ ಮಾತುಗಳು ಮುತ್ತಿನ ಹಾರದಂತೆ ಸುಂದರ, ಆಕರ್ಷಕ ಮತ್ತು ಮೌಲ್ಯಯುತವಾಗಿರಬೇಕು. ಮಾತಿನಲ್ಲಿ ಕೋಮಲತೆ ಮತ್ತು ಸೌಜನ್ಯವಿರಬೇಕು.

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನಾವು ಆಡುವ ಮಾತುಗಳು ಕತ್ತಲೆಯನ್ನು ದೂರಾಗಿಸುವ ಮಾಣಿಕ್ಯದ ಬೆಳಕಿನಂತೆ ಇತರರ ಜೀವನಕ್ಕೆ ದಾರಿದೀಪವಾಗಬೇಕು ಮತ್ತು ಜ್ಞಾನವನ್ನು ಹರಡಬೇಕು.

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ಮಾತುಗಳು ಸ್ಫಟಿಕದ ಕಡ್ಡಿಯಂತೆ ಅತ್ಯಂತ ಸ್ಪಷ್ಟ, ನೇರ ಹಾಗೂ ಪಾರದರ್ಶಕವಾಗಿರಬೇಕು. ಅದರಲ್ಲಿ ಯಾವುದೇ ಕಪಟತನ ಅಥವಾ ಅಸ್ಪಷ್ಟತೆ ಇರಬಾರದು.

ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು. ನಮ್ಮ ಸತ್ಯವಾದ ನುಡಿಗಳನ್ನು ಕೇಳಿ ಸ್ವತಃ ಭಗವಂತನೇ ಲಿಂಗ ಮೆಚ್ಚುಗೆ ವ್ಯಕ್ತಪಡಿಸುವಂತಿರಬೇಕು.

ನುಡಿಯೊಳಗಾಗಿ ನಡೆಯದಿದ್ದರೆ. ನಾವು ಆಡುವ ಮಾತಿನಂತೆ ನಮ್ಮ ಜೀವನದ ನಡತೆ ಇಲ್ಲದಿದ್ದರೆ, ಆ ದೇವ ಕೃತಜ್ಞನಾಗುವುದಿಲ್ಲ. ಅಂದರೆ, ನುಡಿ ಮತ್ತು ನಡೆ ಒಂದೇ ಆಗಿರಬೇಕು ಕಥನಿ ಮತ್ತು ಕರನಿ ಒಂದಾಗಿರಬೇಕು ಇಲ್ಲದಿದ್ದರೆ ದೇವ ಒಲಿಯಲಾರ. ಇಂಥಹ ವಚನಗಳು ನಮಗೆ ದಾರಿದೀಪವಾಗಲಿ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ತಮಿಳುನಾಡಿಗೆ ನೀರು ಹರಿಸುವ ಅಸಂಬದ್ಧ ಆದೇಶ ವಿರುದ್ಧ ಸುಪ್ರೀಂ ಮೊರೆ: ಸಚಿವ ಚಲುವರಾಯಸ್ವಾಮಿ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ತಮಿಳುನಾಡಿಗೆ ನಿತ್ಯ 6 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ಹರಿಸುವಂತೆ ಸಿಡಬ್ಲ್ಯುಆರ್ ಸಿ ನೀಡಿರುವ ಆದೇಶ ಅಸಂಬದ್ಧವಾಗಿದ್ದು, ಅತ್ಯಂತ ನೋವು ಹಾಗೂ ಬೇಸರ ತಂದಿದೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಸಿಡಬ್ಲ್ಯುಆರ್ ಸಿ ಸಭೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ವಾಸ್ತವ ಸ್ಥಿತಿಯ ಬಗ್ಗೆ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ತಮಿಳುನಾಡು 17 ಸಾವಿರ ಕ್ಯೂಸೆಕ್ಸ್ ನೀರಿಗೆ ಬೇಡಿಕೆ ಇಟ್ಟಿತ್ತು. ಆದರೆ ಕಳೆದ ಒಂದು ವಾರದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಒಳಹರಿವು ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ 6 ಸಾವಿರ ಕ್ಯೂಸೆಕ್ಸ್ ನೀರು ಹರಿಸುವುದೂ ನಮಗೆ ಅಸಾಧ್ಯ. ನಾವು 'ಶೂನ್ಯ ನೀರು' ಬಿಡುವ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದೇವೆ" ಎಂದರು. ದೆಹಲಿಯಲ್ಲಿ ಕುಳಿತು ಆದೇಶ ನೀಡುವ ಪ್ರಾಧಿಕಾರಗಳ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡ ಸಚಿವರು, "ದೆಹಲಿಯಲ್ಲಿ ಕುಳಿತು ಆಡಳಿತ ನಡೆಸುವ ಕಾನ್ಸ್ಟಿಟ್ಯೂಷನ್ ಹಾಗೂ ಅಡ್ಮಿನಿಸ್ಟ್ರೇಶನ್ ಬೆಂಚ್‌ಗಳಿಗೆ ನೆಲಮಟ್ಟದ ವಾಸ್ತವ ಸ್ಥಿತಿ ಅರ್ಥವಾಗುತ್ತಿಲ್ಲ.

ಈ ಹಿಂದೆಯೂ ವಾಸ್ತವ ಅರಿಯದೆ ಇದೇ ರೀತಿಯ ಆದೇಶಗಳನ್ನು ನೀಡಿರುವ ನಿದರ್ಶನಗಳಿವೆ. ಸಿಡಬ್ಲ್ಯುಎಂಎ ಸಭೆಲ್ಲಿಯೂ ನಮಗೆ ಹೆಚ್ಚಿನ ಸಮಾಧಾನ ಸಿಗುವುದು ಅನುಮಾನ. ಹೀಗಾಗಿ ಸಿಡಬ್ಲ್ಯೂಎಂಎ ಸಭೆಯ ಬಳಿಕ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಾಳೆಯೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ



ನಡೆಸಿದೆ," ಎಂದು ಮಾಹಿತಿ ನೀಡಿದರು. ರಾಜ್ಯದ ಜಲಾಶಯಗಳ ನೀರಿನ ಸಂಗ್ರಹದ ಕುರಿತು ವಿವರಿಸಿದ ಅವರು, "ಪ್ರಸ್ತುತ ಡ್ಯಾಂಗಳಲ್ಲಿರುವ ನೀರಿನ ಪೈಕಿ ಶೇ. 50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ.

ಭದ್ರಾ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ರೈತರ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ನೀರು ಒದಗಿಸಲಾಗಿದೆ. ಚಿತ್ರದುರ್ಗ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನದಿಯ ಮೂಲಕ ನೀರು ಹರಿಸಲಾಗಿದೆ. ಎಲ್ಲೆಡೆ ಕೆರೆ–ಕುಂಟೆಗಳನ್ನು ತುಂಬಿಸಿ ಜನ–ಜಾನುವಾರುಗಳಿಗೆ ಸಮಸ್ಯೆಯಾಗದಂತೆ ಡ್ಯಾಂಗಳಿಂದ ನಿಯಂತ್ರಿತವಾಗಿ ನೀರು ನಿರ್ವಹಣೆ ಮಾಡಲಾಗುತ್ತಿದೆ," ಎಂದರು. ಇದೇ ವೇಳೆ ವಿರೋಧ ಪಕ್ಷದ ನಾಯಕರ ಪಾದಯಾತ್ರೆಯ ಕುರಿತು ವ್ಯಂಗ್ಯವಾಡಿದ ಸಚಿವ ಚಲುವರಾಯಸ್ವಾಮಿ, "ಬಿಜೆಪಿಯವರು ಯಾರ ಹಠಕ್ಕೆ ಬಿದ್ದು ಪಾದಯಾತ್ರೆ ನಡೆಸುತ್ತಿದ್ದಾರೆ ಎಂಬುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ಈಗಾಗಲೇ ಆರ್. ಅಶೋಕ್ ಅವರಿಗೆ ಕಾಲು ನೋವು ಕಾಣಿಸಿಕೊಂಡಿದೆ. ಅಲ್ಲಿರುವ ನಾಯಕರೂ ನಮ್ಮ ಸ್ನೇಹಿತರೇ ಆಗಿದ್ದು, ಪಾದಯಾತ್ರೆ ಮಾಡುವವರ ಆರೋಗ್ಯ ಕೆಡದಿರಲಿ. ಪಾದಯಾತ್ರೆ ಮುಗಿದ ಮೇಲೂ ಅವರ ಆರೋಗ್ಯ ಸ್ಥಿರವಾಗಿರಲಿ ಎಂದು ಆಶಿಸುತ್ತೇನೆ," ಎಂದು ಟಾಂಗ್ ನೀಡಿದರು.

# ಕಲಬುರಗಿ ಕ್ರೀಡಾ ಹಬ್ಬ–2026 ನೋಂದಣಿ ಆರಂಭ

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಜಿಲ್ಲೆಯ ಅತಿದೊಡ್ಡ ಕ್ರೀಡಾ ಸಂಭ್ರಮವಾದ ಕಲಬುರಗಿ ಕ್ರೀಡಾ ಹಬ್ಬ–2026 ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಸೆಪ್ಟೆಂಬರ್ 25, 26 ಮತ್ತು 27ರಂದು ಮೂರು ದಿನಗಳ ಕಾಲ ಕ್ರೀಡಾ ಹಬ್ಬ ನಡೆಯಲಿದೆ. ಜಿಲ್ಲಾಡಳಿತದ ನೇತೃತ್ವದಲ್ಲಿ ಕಲಬುರಗಿ ನೆಕ್ಸ್ಟ್ ಫೌಂಡೇಷನ್ (Kalaburagi Next Foundation) ಸಹಯೋಗದೊಂದಿಗೆ ಆಯೋಜಿಸಲಾಗುತ್ತಿರುವ ಈ ಕ್ರೀಡಾ ಹಬ್ಬದಲ್ಲಿ ಜಿಲ್ಲೆಯಾದ್ಯಂತದ ಕ್ರೀಡಾಪಟುಗಳು, ಕ್ರೀಡಾಭಿಮಾನಿಗಳು ಹಾಗೂ ಕುಟುಂಬಗಳು ಭಾಗವಹಿಸಲಿದ್ದಾರೆ.**

ಈ ಕುರಿತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗೃಹ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ 'ಫ' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದು, ಕಲಬುರಗಿ ತನ್ನ ಅತಿದೊಡ್ಡ ಕ್ರೀಡಾ ಸಂಭ್ರಮಕ್ಕೆ ಸಜ್ಜಾಗುತ್ತಿದೆ ಎಂದು ತಿಳಿಸಿದ್ದಾರೆ. ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್,





ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಚೆಸ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಸೈಕ್ಲಿಂಗ್‌ನಂತಹ ಕ್ರೀಡಾ ಚಟುವಟಿಕೆಗಳಲ್ಲಿಯೂ ಕ್ರೀಡಾಭಿಮಾನಿಗಳು ಪಾಲ್ಗೊಳ್ಳಬಹುದಾಗಿದೆ. ಕ್ರೀಡಾ ಸ್ಪರ್ಧೆಗಳ ಜತೆಗೆ ಮನರಂಜನೆ, ವಿವಿಧ ಚಟುವಟಿಕೆಗಳು ಮತ್ತು ಸಮುದಾಯದ ಎಲ್ಲ ವರ್ಗದ ಜನರು ಒಟ್ಟಾಗಿ ಸೇರಿ ಸಂಭ್ರಮಿಸುವಂತಹ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲು ಯೋಜಿಸಲಾಗಿದೆ. ಈ ಮೂಲಕ ಕ್ರೀಡೆಯನ್ನು ಕೇವಲ ಸ್ಪರ್ಧೆಯಾಗಿ ನೋಡದೆ, ಇಡೀ ಸಮುದಾಯವನ್ನು ಒಗ್ಗೂಡಿಸುವ ಉತ್ಸವವನ್ನಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

"ನಮ್ಮ ಯುವ ಕ್ರೀಡಾಪಟುಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಂಡು, ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದರ ಜತೆಗೆ ಕ್ರೀಡಾ ಸ್ಫೂರ್ತಿಯನ್ನು ಬೆಳೆಸಿಕೊಳ್ಳಬೇಕು" ಎಂದು ಪ್ರಿಯಾಂಕ್ ಖರ್ಗೆ ಅವರು ಕರೆ ನೀಡಿದ್ದಾರೆ.

"ನಿಮ್ಮ ನೆಚ್ಚಿನ ಕ್ರೀಡೆಯನ್ನು ಆಯ್ಕೆ ಮಾಡಿಕೊಳ್ಳಿ. ನಿಮ್ಮ ತಂಡವನ್ನು ಕರೆತನ್ನಿ. ಬನ್ನಿ, ಕಲಬುರಗಿ– ಆಟವಾಡೋಣ!" ಎಂದು ಸಚಿವ ಪ್ರಿಯಾಂಕ್ ಖರ್ಗೆ ಸಂದೇಶ ನೀಡಿದ್ದಾರೆ. ಕಲಬುರಗಿ ಜಿಲ್ಲೆಯ ಕ್ರೀಡಾ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವುದು, ಯುವಜನರಲ್ಲಿ ಕ್ರೀಡಾಸಕ್ತಿ ಹೆಚ್ಚಿಸುವುದು ಹಾಗೂ ಕ್ರೀಡೆಯ ಮೂಲಕ ಆರೋಗ್ಯಕರ ಮತ್ತು ಸಕ್ರಿಯ ಸಮುದಾಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಈ ಕ್ರೀಡಾ ಹಬ್ಬ ಮಹತ್ವದ ಹೆಜ್ಜೆಯಾಗಗಲಿದೆ ಎಂದೂ ಸಚಿವರು ವಿವರಿಸಿದ್ದಾರೆ ಸೆಪ್ಟೆಂಬರ್ 25, 26 ಮತ್ತು 27ರಂದು ನಡೆಯಲಿರುವ ಕಲಬುರಗಿ ಸ್ಪೋರ್ಟ್ಸ್ ಹಬ್ಬ–2026ರಲ್ಲಿ ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಸಚಿವರು ಮನವಿ ಮಾಡಿದ್ದಾರೆ.

## ಅಂತಾರಾಷ್ಟ್ರೀಯ ದೇಹಧಾರ್ಢ್ಯ ಪಟು ಜಿಮ್ ರವಿ ಅವರ ಜೀವನ ಆಧರಿಸಿ ಬರೆದಿರುವ "ರವಿ ನೀನು ಆಗಸದಲ್ಲಿ" ಕೃತಿ ಬಿಡುಗಡೆ ಮಾಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಅಂತಾರಾಷ್ಟ್ರೀಯ ದೇಹಧಾರ್ಢ್ಯ ಪಟು ಜಿಮ್ ರವಿ ಅವರ ಜೀವನ ಆಧರಿಸಿ ಬರೆದಿರುವ "ರವಿ ನೀನು ಆಗಸದಲ್ಲಿ" ಕೃತಿ ಬಿಡುಗಡೆ ಮಾಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ಬಿಡುಗಡೆ ಮಾಡಿ ಶುಭ ಹಾರೈಸಿದರು



ಸಮಾರಂಭದಲ್ಲಿ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಸಚಿವರಾದ ನರೇಂದ್ರಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ. ರೇವಣ್ಣ, ಹಿರಿಯ ಸಾಹಿತಿಗಳಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್ ಮತ್ತಿತರರು ಈ ಸಮಾರಂಭದಲ್ಲಿ ಭಾಗವಹಿಸಿ ರವಿ ನೀನು ಆಗಸದಲ್ಲಿ ಎಂಬ ಕೃತಿಯ ಬಗ್ಗೆ ಮಾತನಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು

## ಇನ್‌ಸ್ಟಾಗ್ರಾಂನಲ್ಲಿ ತಲ್ವಾರ್ ಹಿಡಿದು ಪೋಸ್ ಕೊಟ್ಟಿದ್ದ ಪುಂಡನ ಬಂಧನ

ನೈಜ್ಯ ದೆಸೆ ನ್ಯೂಸ್

**ಹುಬ್ಬಳ್ಳಿ: ಇನ್‌ಸ್ಟಾಗ್ರಾಂ ಖಾತೆಯಲ್ಲಿ ತಲ್ವಾರ್ ಹಿಡಿದು ಫೋಟೊ ಹಂಚಿಕೊಂಡಿದ್ದ ಹಳೇ ಹುಬ್ಬಳ್ಳಿಯ ಈಶ್ವರನಗರದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿ, ತಲ್ವಾರ್ ವಶಪಡಿಸಿಕೊಂಡಿದ್ದಾರೆ.ಗಂಗಾಧರ ಮಡಿವಾಳ ಬಂಧಿತ ಆರೋಪಿ. ಸಾರ್ವಜನಿಕರಲ್ಲಿ ಭಯದ ವಾತಾವರಣ ಮೂಡಿಸುವ ರೀತಿಯಲ್ಲಿ ತಲ್ವಾರ್ ಹಿಡಿದುಕೊಂಡಿರುವ ಫೋಟೊವನ್ನು ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.**



ಈ ಸಂಬಂಧ ಕಸಬಾಪೇಟೆ ಪೊಲೀಸ್ ಠಾಣೆಯಲ್ಲಿ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಮುಂದುವರಿಸಿರುವ ಪೊಲೀಸರು, ಚಾಕು ಇರಿತ ನಿಗ್ರಹ ಪಡೆ ಅಧಿಕಾರಿ ಎಎಸ್‌ಐ ಎಸ್.ಜಿ. ವಡ್ಡರ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನಿಂದ ತಲ್ವಾರ್ ವಶಪಡಿಸಿಕೊಳ್ಳಲಾಗಿದ್ದು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ.

# ಉಚಿತ ನೇತ್ರ ತಪಾಸಣೆ ಮತ್ತು ಕನ್ನಡಕ ಚಿ ದೊಡ್ಡಪ್ಪ ಅಪ್ಪಾ ವಿತರಿಸಿದರು

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ನಗರದ ಶ್ರೀ ಶರಣ ಬಸವೇಶ್ವರರ ಅನುಭವ ಮಂಟಪದ ಪ್ರಾಂಗಣದಲ್ಲಿ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಭಕ್ತದಿಗಳಿಗೆ ನೇತ್ರ ತಪಾಸಣೆ ಮತ್ತು ಕನ್ನಡಕ ವಿತರಣೆ ಕಾರ್ಯಕ್ರಮದ ಶಿಬಿರ ಪ್ರತಿ ಶ್ರಾವಣ ಸೋಮವಾರ ದಂದು ಹಮ್ಮಿಕೊಳ್ಳಲಾಗುತಿತ್ತು, ಶರಣ ಭಕ್ತರಿಗೆ ಉಚಿತ ನೇತ್ರಾ ತಪಾಸಣೆ ಒಳಗಾದವರಿಗೆ ಉಚಿತ ಕನ್ನಡಕವನ್ನು ಪೂಜ್ಯ ಶ್ರೀ ಚಿರಂಜೀವಿ ದೊಡ್ಡಪ್ಪ ಅಪ್ಪಾ ನವರು ಕಣ್ಣಿನ ಕನ್ನಡಕವನ್ನು ದೃಷ್ಟಿ ದೋಷ ಉಳ್ಳವರಿಗೆ ವಿತರಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕಲಬುರಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿ ಮಾಂದ್ಯತೆ ನಿಯಂತ್ರಣ ಕಾರ್ಯಕ್ರಮ ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಕಲಬುರಗಿ. ಹಾಗೂ



ಆಶಾಕಿರಣ ದೃಷ್ಟಿ ಕೇಂದ್ರ. ಕಲಬುರಗಿ. ಸಂಯೋಜನೆಯಿಂದ ನಡೆಯುತಿರುವ ಕಾರ್ಯಕ್ರಮ. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮಾಧಿಕಾರಿಗಳು ಡಾ. ರವಿಕಾಂತಿ ಕ್ಯಾತನಾಳ್. ರವರ ನೇತೃತ್ವದಲ್ಲಿ. ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಇದೇ ಸಂದರ್ಭದಲ್ಲಿ. ಬಸವರಾಜ ದೇಶಮುಖ್, ವೈದ್ಯರು ಡಾ. ಅಲ್ಲಮ್ಮ ಪ್ರಭು ದೇಶಮುಖ್.ಇದ್ದರು. ತಪಾಸಣೆ ಮತ್ತು ಕನ್ನಡಕ ವಿತರಣೆ ನೇತ್ರಾಧಿಕಾರಿಗಳಾದ ಸಿದ್ದು ಹಿರೇಮಠ, ಆಯೇಷಾ ಅವರಿಂದ, ಪ್ರತಿ ಸೋಮವಾರ ಜಿಲ್ಲಾ ಅಂಧತ್ವ ಘಟಕದ ಅಡಿಯಲ್ಲಿ ಶಿಬಿರವನ್ನು ನಡೆಸುತ್ತಿದ್ದೇವೆ, ಇಲ್ಲಿಯ ವರಿಗೆ 280ಕ್ಕೂ ಹೆಚ್ಚು ನೇತ್ರಾ ತಪಾಸಣೆ ಮಾಡಲಾಗಿದೆ ಎಂದು ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮಾಧಿಕಾರಿಗಳು ಡಾ. ರವಿಕಾಂತಿ ಕ್ಯಾತನಾಳ್ ಹೇಳಿದರು.

ಮಹಾ ದಾಸೋಹ ಶ್ರೀ ಶರಣಬಸವೇಶ್ವರರ ಭಕ್ತಿಗೆ ಸಾವಿರು ಭಕ್ತರು ಪಾದ ಯಾತ್ರೆ ಮೂಲಕ ಸಂಸ್ಥಾನಕ್ಕೆ ಬರುವ ಭಕ್ತರಿಗೆ ಉಚಿತ ಆರೋಗ್ಯ ತಪಾಸಣೆ ಜೊತೆಗೆ ನೇತ್ರಾ ತಪಾಸಣೆ ಮಾಡುತ್ತಿರುವ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೂ ಅವರ ಕಾರ್ಯ ವೈಖರಿಯ ಬಗ್ಗೆ ಪ್ರಶಂಶಿಸಿದರು.. ಸರ್ವಜನಿಕರು. ಶರಣ ಭಕ್ತರು ಇದರ ಸದುಪಯೋಗ ಪಡೆದುಕೊಂಡರು..

# ಬೆಂಗಳೂರಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಎಂಜಿನಿಯರಿಂಗ್ ವಿದ್ಯಾರ್ಥಿ ಆತಹತ್ಯೆ ಮಾಡಿಕೊಂಡಿರುವ ಘಟನೆ ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ವಸಂತ ವಲ್ಲಭ ನಗರದ ಮೂರನೇ ಮುಖ್ಯರಸ್ತೆ ನಿವಾಸಿ ವೇದಾಂತ್ (20) ಆತಹತ್ಯೆ ಮಾಡಿಕೊಂಡ ವಿದ್ಯಾರ್ಥಿ.**

ಈತ ಚನ್ನಸಂದ್ರದ ಜೆಎಸ್‌ಎಸ್ ಕಾಲೇಜಿನಲ್ಲಿ ಮೂರನೇ ವರ್ಷದ ಬಿ ಇ ವ್ಯಾಸಂಗ ಮಾಡುತ್ತಿದ್ದ. ರಿಯಲ್ ಎಸ್ಟೇಟ್ ಕೆಲಸ ಮಾಡಿಕೊಂಡಿರುವ ಶಿವಕುಮಾರ್ ಎಂಬುವವರ ಎರಡನೇ ಮಗನಾದ ವೇದಾಂತ್ ತನ್ನ ಚಿಕ್ಕಪ್ಪನ



ಮಗ ವಿಪುಲ್‌ಗೌಡ ಒಂದೇ ಕಾಲೇಜಿನಲ್ಲಿ ಓದುತ್ತಿದ್ದು, ಒಂದು ತಿಂಗಳಿನಿಂದ ಕಾಲೇಜಿಗೆ ರಜೆ ಇದ್ದುದರಿಂದ ಮನೆಯಲ್ಲಿಯೇ ಇದ್ದರು. ಸೆ.6ರಂದು ರಾತ್ರಿ ಎಂದಿನಂತೆ ಊಟ ಮಾಡಿ ಇವರಿಬ್ಬರೂ ಮೊದಲ ಮಹಡಿಯಲ್ಲಿ ಕುಳಿತುಕೊಂಡು ಮಾತನಾಡಿಕೊಂಡು ಮಲಗಿದ್ದಾರೆ. ಬೆಳಗಾಗುವಷ್ಟರಲ್ಲಿ ವೇದಾಂತ್ ಎರಡನೇ ಮಹಡಿಯಲ್ಲಿರುವ ರೂಂಗೆ ಹೋಗಿ ಫ್ಯಾನಿನ ಹುಕ್‌ಗೆ ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿದ್ದಾನೆ. ಬೆಳಗ್ಗೆ ಎದ್ದಾಗ ವೇದಾಂತ್ ಇಲ್ಲದಿರುವುದನ್ನು ಗಮನಿಸಿ ವಿಪುಲ್‌ಗೌಡ ಎಲ್ಲಾ ಕಡೆ ಹುಡುಕಾಡಿ ಫೋನ್ ಮಾಡಿದ್ದಾರೆ.

ಫೋನ್ ಕರೆ ಸ್ವೀಕರಿಸದಿದ್ದಾಗ ತಕ್ಷಣ ಮನೆಯವರಿಗೆ ತಿಳಿಸಿದ್ದಾರೆ. ಶಿವಕುಮಾರ್‌ರವರು ಮನೆಯ ಎಲ್ಲಾ ಕಡೆ ಹುಡುಕಾಡಿ ನಂತರ ಎರಡನೇ ಮಹಡಿಯ ರೂಂ ಬಳಿ ಹೋಗಿ ನೋಡಿದಾಗ ಒಳಗಿನಿಂದ ಲಾಕ್ ಆಗಿರುವುದು ಕಂಡುಬಂದಿದೆ. ತಕ್ಷಣ ಗಾಬರಿಯಾಗಿ ಕಿಟಕಿ ಮೂಲಕ ನೋಡಿದಾಗ ವೇದಾಂತ್ ನೇಣು ಹಾಕಿಕೊಂಡಿರುವುದನ್ನು ಗಮನಿಸಿ ತಕ್ಷಣ ಬಾಗಿಲು ಒಡೆದು ಒಳಗೆ ಹೋಗಿ ಕುಣಿಕೆಯಿಂದ ಕೆಳಗಿಳಿಸಿ ನೋಡಿದಾಗ ಆತ ಮೃತಪಟ್ಟಿರುವುದು ಗೊತ್ತಾಗಿದೆ.

ಈ ಬಗ್ಗೆ ವೇದಾಂತ್ ತಂದೆ ಶಿವಕುಮಾರ್‌ರವರು ಪೊಲೀಸರಿಗೆ ದೂರು ನೀಡಿದ್ದು, ಆತಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಯಾವುದೋ ವಿಚಾರಕ್ಕೆ ಮನನೊಂದು ಜೀವನದಲ್ಲಿ ಜಿಗುಪ್ಸೆಗೊಂಡು ಆತಹತ್ಯೆ ಮಾಡಿಕೊಂಡಿದ್ದಾನೆಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಷರಿಯಾ ನ್ಯಾಯಾಲಯಗಳಿಗೆ ವಿಚ್ಛೇದನದ ನೀಡಲು ಅಧಿಕಾರವಿಲ್ಲ: ಛತ್ತೀಸ್‌ಗಢ ಹೈಕೋರ್ಟ್

ನೈಜ್ಯ ದೆಸೆ ನ್ಯೂಸ್

**ರಾಯ್‌ಪುರ: ಖಾಸಗಿ ಧಾರ್ಮಿಕ ಸಂಸ್ಥೆಗಳು ಅಥವಾ ಶರಿಯಾ ನ್ಯಾಯಾಲಯಗಳು ಧಾರ್ಮಿಕ ಅಭಿಪ್ರಾಯ, ಫತ್ವಾ ಅಥವಾ ಸಲಹೆಗಳನ್ನು ನೀಡಬಹುದೇ ಹೊರತು, ಕಾನೂನುಬದ್ಧ ಆದೇಶಗಳ ಮೂಲಕ ವ್ಯಕ್ತಿಯ ವೈವಾಹಿಕ ಹಕ್ಕುಗಳು ಅಥವಾ ಸ್ಥಿತಿಯನ್ನು ಬದಲಾಯಿಸುವ ಹಾಗೂ ವಿಚ್ಛೇದನ ನೀಡುವ ಅಧಿಕಾರ ಹೊಂದಿಲ್ಲ ಎಂದು ಛತ್ತೀಸ್‌ಗಢ ಹೈಕೋರ್ಟ್ ಮಹತ್ವದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ರಾಯ್‌ಪುರದ ಶರಿಯಾ ನ್ಯಾಯಾಲಯವೊಂದು ಮಹಿಳೆಯ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಅನೂರ್ಜಿತಗೊಳಿಸಿದೆ.**

38 ವರ್ಷದ ನಿರೋಶ್ ಅಬ್ಬಾಸಿ ಅವರ ಪ್ರಕರಣ ಇದಾಗಿದೆ. ಅಬ್ಬಾಸಿ ಅವರ ಮೊದಲ ಪತಿ 2015ರಲ್ಲಿ ಮೃತಪಟ್ಟಿದ್ದರು. ಬಳಿಕ ಅವರು 2022ರಲ್ಲಿ ಮೊಹಮದ್ ಅಬಿದ್ ಖಾನ್ ಅವರನ್ನು ವಿವಾಹವಾಗಿದ್ದರು. ಮಕ್ಕಳನ್ನು ಹೊಸ ಕುಟುಂಬದೊಂದಿಗೆ ಹೊಂದಾಣಿಕೆ ಮಾಡಿಸುವ ವಿಚಾರ ಸೇರಿದಂತೆ ಹಲವು ವಿಷಯಗಳಲ್ಲಿ ದಂಪತಿಗಳ ನಡುವೆ ವಿವಾದ ಉಂಟಾಗಿತ್ತು. ಈ ನಡುವೆ, ಪತಿ 2021ರ ಆಗಸ್ಟ್ 31, ಸೆಪ್ಟೆಂಬರ್ 30 ಹಾಗೂ ಅಕ್ಟೋಬರ್ 30ರಂದು ತ್ರಿವಳಿ ತಲಾಖ್ ನೀಡಿದ್ದರು ಎಂದು ಅಬ್ಬಾಸಿ ಆರೋಪಿಸಿದ್ದರು. ಅಲ್ಲದೆ, ಪತಿ ಹಾಗೂ ಅತ್ತೆ–ಮಾವಂದಿರು ಕಿರುಕುಳ ಮತ್ತು ಕ್ರೌರ್ಯ ಎಸಗಿದ್ದಾರೆ ಎಂದು ಆರೋಪಿಸಿ 2021ರ



ಅಕ್ಟೋಬರ್ 7ರಂದು ದೂರು ದಾಖಲಿಸಿದ್ದರು. ನವೆಂಬರ್ 1ರಂದು ಎಫ್‌ಐಆರ್ ದಾಖಲಾಗಿತ್ತು.

ಈ ವಿವಾದಗಳ ನಡುವೆಯೇ ರಾಯ್‌ಪುರ ಶರಿಯಾ ನ್ಯಾಯಾಲಯವು 2022ರ ಜನವರಿ 18ರಂದು ಅಬ್ಬಾಸಿ ಅವರು ಪತಿಯಿಂದ ವಿಚ್ಛೇದನ ಪಡೆದಿದ್ದಾರೆ ಎಂದು ಘೋಷಿಸಿ ಆದೇಶ ಹೊರಡಿಸಿತು. ಧಾರ್ಮಿಕ ಸಂಸ್ಥೆಗಳಿಗೆ ಸೀಮಿತ ಅಧಿಕಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಮಿತೇಂದ್ರ ಕಿಶೋರ್ ಪ್ರಸಾದ್ ನೇತೃತ್ವದ ಹೈಕೋರ್ಟ್ ಪೀಠವು, ದಾರುಲ್ ಖಾಜಾ ಅಥವಾ ಇಂತಹ ಖಾಸಗಿ ಧಾರ್ಮಿಕ ಸಂಸ್ಥೆಗಳು ಕಾನೂನುಬದ್ಧವಾಗಿ ಸ್ಥಾಪಿತ ನ್ಯಾಯಾಲಯಗಳಲ್ಲ ಎಂದು ಸ್ಪಷ್ಟಪಡಿಸಿತು.ಇಂತಹ ಸಂಸ್ಥೆಗಳು ಧಾರ್ಮಿಕ ದೃಷ್ಟಿಕೋನ, ಅಭಿಪ್ರಾಯ ಅಥವಾ ಸಲಹೆಗಳನ್ನು ನೀಡಬಹುದಾದರೂ, ತಮ್ಮ ಆದೇಶಗಳ ಮೂಲಕ ವ್ಯಕ್ತಿಯ ಕಾನೂನುಬದ್ಧ ಹಕ್ಕುಗಳು, ವೈವಾಹಿಕ ಸ್ಥಿತಿ ಅಥವಾ ಕಾನೂನುಬದ್ಧ ಬಾಧ್ಯತೆಗಳಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

ವೈವಾಹಿಕ ವಿವಾದಗಳು, ವಿಚ್ಛೇದನ ಹಾಗೂ ಇತರ ವೈವಾಹಿಕ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಬದ್ಧ ನಿರ್ಣಯಗಳನ್ನು ಸಮರ್ಥ ನ್ಯಾಯಾಂಗ ಅಥವಾ ಕಾನೂನುಬದ್ಧ ಪ್ರಕ್ರಿಯೆಯ ಮೂಲಕವೇ ಕೈಗೊಳ್ಳಬೇಕು. ಖಾಸಗಿ ಧಾರ್ಮಿಕ ಸಂಸ್ಥೆಗಳು ಇಂತಹ ನಿರ್ಣಯಗಳನ್ನು ಕಾನೂನುಬದ್ಧವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ. ಆಧುನಿಕ ಕಾನೂನು ವ್ಯವಸ್ಥೆಯಲ್ಲಿ ಖಾಸಗಿ ಧಾರ್ಮಿಕ ಸಂಸ್ಥೆಗಳ ಅಧಿಕಾರದ ಮಿತಿಗಳನ್ನು ಮತ್ತೊಮ್ಮೆ ಸ್ಪಷ್ಟಪಡಿಸಿರುವ ಈ ತೀರ್ಪು, ವೈವಾಹಿಕ ಹಕ್ಕುಗಳು ಹಾಗೂ ನ್ಯಾಯಾಂಗ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಹತ್ವದ ಸಂದೇಶ ನೀಡಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101